ಕೂಡ ಮಾಡುತ್ತೇನೆ. ಬೆಂಗಳೂರಿಗೊಂದು ಕಾನೂನು, ಮಂಗಳೂರಿಗೊಂದು ಕಾನೂನು ತಂದರೆ ಖಂಡಿತವಾಗಿಯು ನಡೆಯುವುದಿಲ್ಲವೆಂಬುದನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಯಾವ ಕಾರಣಕ್ಕೋಸ್ಕರ ಬೆಂಗಳೂರಿಗೆ ವಿಶೇಷ ಸೌಲಭ್ಯ ಕೊಡುತ್ತಿದ್ದೀರಿ? ಮಂಗಳೂರಿಗೆ ಏಕೆ ಈ ಸೌಲಭ್ಯ ಇಲ್ಲ? ಇನ್ನಿತರ ಪುರಸಭೆಗಳಿಗೆ ಏಕಿಲ್ಲ? ಇಂತಹ ತಾರತಮ್ಯ ನೀತಿಯನ್ನು ತಾವೇಕೆ ತರುತ್ತಿದ್ದೀರಿ? ಇದನ್ನು ನಾನು ಈ ಸಂದರ್ಭದಲ್ಲಿ ಸ್ಪಷ್ಟವಾಗಿ ಖಂಡಿಸುವ ಮೂಲಕ ನನ್ನ ಅನಿಸಿಕೆಗಳನ್ನು ವ್ಯಕ್ತಪಡಿಸಿ ಇದನ್ನು ಪರಾಮರ್ಶೆಗಾಗಿ ಜಂಟಿ ಸದನ ಸಮಿತಿಗೆ ಒಪ್ಪಿಸಬೇಕೆಂದು ಮತ್ತೊಮ್ಮೆ ಒತ್ತಾಯ ಮಾಡುತ್ತೇನೆ.

4. ಕರ್ನಾಟಕದ ಮಧ್ಯಮಾವಧಿ ಆರ್ಥಿಕ ಯೋಜನೆ 2003-2004 ರಿಂದ 2006-2007ನ್ನು ಸದನದ ಮುಂದೆ ಮಂಡಿಸುವುದು

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿ) : ಮಾನ್ಯ ಚೇರ್ಮನ್‌ರವರೆ, ನಿನ್ನೆ ನಾನು ಸದನಕ್ಕೆ ಆಶ್ವಾಸನೆ ಕೊಟ್ಟಂತೆ ಇವೊತ್ತು ಕರ್ನಾಟಕ ಮಧ್ಯಮಾವಧಿ ಆರ್ಥಿಕ ಯೋಜನೆ 2003-04 ರಿಂದ 2006-07 ಅನ್ನು ಸದನದ ಮುಂದೆ ಮಂಡಿಸಲು ತಮ್ಮ ಅಪ್ಪಣೆ ಬೇಡುತ್ತೇನೆ.

5. ಚೇರ್ಮನ್ : ಮಂಡಿಸಲಾಯಿತು

5. ಶಾಸನ ರಚನೆ

(1) ಕರ್ನಾಟಕ ಪೌರ ನಿಗಮಗಳ (ತಿದ್ದುಪಡಿ) ವಿಧೇಯಕ 2003 (ಮುಂದು)

† ಶ್ರೀ ಡಿ.ಕೆ. ಶಿವಕುಮಾರ್ (ನಗರಾಭಿವೃದ್ಧಿ ಸಚಿವರು) : ಮಾನ್ಯ ಚೇರ್ಮನ್‌ರವರೆ, 2003ರ ಕರ್ನಾಟಕ ಪೌರ ನಿಗಮಗಳ (ತಿದ್ದುಪಡಿ) ವಿಧೇಯಕದ ಬಗ್ಗೆ ಸುಮಾರು ಎರಡು ಗಂಟೆಗಳ ಕಾಲ ಮಾನ್ಯ ವಿರೋಧ ಪಕ್ಷದ ನಾಯಕರಾದ ಜಗದೀಶ್ ಶೆಟ್ಟರ್, ಬಿ. ಸೋಮಶೇಖರ್, ಎ. ರಾಮದಾಸ್, ಕೆ. ಜಯಪ್ರಕಾಶ್ ಹೆಗ್ಡೆ, ವಿಶ್ವೇಶ್ವರ ಹೆಗಡೆ ಕಾಗೇರಿ, ಮತ್ತು ಎನ್. ಯೋಗೀಶ್ ಭಟ್‌ರವರು ಮಾತನಾಡಿ ಅನೇಕ ವಿಚಾರ, ಅಭಿಪ್ರಾಯಗಳನ್ನು ವ್ಯಕ್ತಪಡಿಸುವ ಮೂಲಕ ಕೆಲವು ವಿಚಾರಗಳ ಮೇಲೆ ಬೆಳಕನ್ನೂ ಕೂಡ ಚೆಲ್ಲಿದ್ದಾರೆ.

12.50 ಪಿಎಂ

ಕೆಲವು ಸಂದರ್ಭದಲ್ಲಿ ಅಭಿನಂದನೆಯನ್ನೂ ಸಲ್ಲಿಸಿದ್ದಾರೆ. ಕೆಲವು ಕಡೆ ವಿರೋಧ ಕೂಡ ಮಾಡುತ್ತೇವೆಂದು ಪ್ರಸ್ತಾಪ ಸಹ ಮಾಡಿದ್ದಾರೆ. ಮುಖ್ಯಮಂತ್ರಿಗಳು ಎಲ್ಲಿಯವರೆಗೆ ಈ ಸದನದಲ್ಲಿ ಇರಲಿಲ್ಲ. ಅಲ್ಲಿಯವರೆಗೆ ಎಲ್ಲಾ ಚೆನ್ನಾಗಿ ಮಾಡಿದ್ದೀರಿ, ಅಭಿನಂದನೆಗಳು, ಸ್ವಾಗತಾರ್ಹವೆಂದು ಹೇಳುತ್ತಿದ್ದಿರಿ. ಮುಖ್ಯಮಂತ್ರಿಗಳು ಬಂದ ತಕ್ಷಣ, ಉತ್ತರ ಕನ್ನಡ ಶಾಸಕರು, ಇಲ್ಲಾ ನಾವು ಇದನ್ನು ವಿರೋಧ ಮಾಡುತ್ತೇವೆ. ಜಂಟಿ ಸದನದ ಸಮಿತಿಗೆ ರೆಫರ್ ಮಾಡಿ ಎಂದು ಹೇಳುತ್ತಿದ್ದಾರೆ. ರಾಮದಾಸ್ ರವರ ಭಾಷಣವನ್ನು ನಾನು ನೋಡುತ್ತಿದ್ದಾಗ.., ನಾನು ಈ ಕಾರ್ಪೊರೇಷನ್ ಇಲಾಖೆ ಬಂದ ತಕ್ಷಣ ನಗರಗಳ ಚರಿತ್ರೆಗಳಿಗೆ ಬಂದೆ. ನಗರಗಳ ಚರಿತ್ರೆ ಎಲ್ಲಿದೆ ಎಂದು ನಾನು ಬಂದೆ. ಏಕೆಂದರೆ ನಾನು ಹಳ್ಳಿಯಿಂದ ಬಂದವನು. ಈ ಇಲಾಖೆಯನ್ನು ಮುಖ್ಯಮಂತ್ರಿಗಳು ಕೊಟ್ಟಮೇಲೆ, ಈ ಇಲಾಖೆಯ ಬಗ್ಗೆ ಅಭ್ಯಾಸ ಮಾಡಿ ನೋಡಿದಾಗ, ಇಲ್ಲಿ ಎಂತೆಂಥ ಪಂಡಿತರು, ಬುದ್ದಿವಂತರು, ರಾಷ್ಟ್ರದ ನಾಯಕರು, ಜವಹರಲಾಲ್‌ನೆಹರೂರಂಥವರು, ಡಾ: ರಾಧಾಕೃಷ್ಣನ್‌ಅಂತವರು, ನೇತಾಜಿ ಬೋಸ್‌ರಂತವರು, ರಾಜಾಜಿಯವರು, ಕೆಂಗಲ್ ಹನುಮಂತಯ್ಯನವರು, ವಲ್ಲಬಾಯಿ

(† ಈ ಚಿಹ್ನೆಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ)

ಪಟೇಲ್‌ರಂಥವರೆಲ್ಲಾ ನಗರಗಳಿಂದ ಉದ್ಭವವಾದಂಥ ಈ ರಾಷ್ಟ್ರದ ಮಹಾನ್ ವ್ಯಕ್ತಿಗಳು, ಬೇಕಾದಷ್ಟು ಚಿಂತನೆಯನ್ನು ಮಾಡಿ ಅವರುಗಳು ಅವರದ್ದೇ ಆದ ರೀತಿಯಲ್ಲಿ ಜನರ ಹತ್ತಿರ ಹೋಗಿ ಆಯ್ಕೆಯಾಗಿ ಇವತ್ತು ಅಂಥ ಸ್ಥಾನಕ್ಕೆ ಬಂದಿದ್ದಾರೆ. ಈ ಸಭೆಯಿಂದ ಕೂಡ ಇಂಥವರು ಉತ್ಪತ್ತಿಯಾಗುತ್ತಾರೆನೋ ಎಂದು ನನ್ನ ಆಸೆ. ಯಾರಾದರೂ ಬರುತ್ತಾರೆನೋ ಎಂದು ಆಸೆ. ಆದರೆ ರಾಮ್‌ದಾಸ್‌ರವರ ಬಗ್ಗೆ ಬರುತ್ತಾರೆ ಬರುತ್ತಾರೆ ಎಂದು ಸ್ವಲ್ಪ ನಂಬಿಕೆ ಇತ್ತು. ಸ್ವಲ್ಪ ಮೇಲೆ ಬರುತ್ತಾರೆ, ಏಳುತ್ತಾರೆ ಅನಂತರ ಯಾಕೋ ಡಮಾರ್ ಎಂದು ಬೀಳುತ್ತಾರೆ. ಆದರೂ ವಿಶ್ವಾಸ ಇದೆ. ಸ್ವಲ್ಪ ಏನಾದರೂ ಮಾಡಿ. ಒಂದನ್ನು ಅವರಿಗೆ ಹೇಳುವುದು. ಈ ರಾಜ್ಯದಲ್ಲಿ ಮಾನ್ಯ ಎಸ್.ಎಂ. ಕೃಷ್ಣರವರ ನೇತೃತ್ವದ ಸರ್ಕಾರ ರಾಜ್ಯದಲ್ಲಿ ಬಂದ ಮೇಲೆ ನಗರಗಳಲ್ಲಿ, ಗ್ರಾಮೀಣ ಪ್ರದೇಶದ ಬಗ್ಗೆ ಬೇರೆ ಸಂದರ್ಭದಲ್ಲಿ ಬರುತ್ತೇನೆ. ಈ ನಗರಕ್ಕೆ ಸಂಬಂಧಪಟ್ಟಂತೆ ತಂದಂಥ ಅನೇಕಬದಲಾವಣೆಗಳು, ನಗರದಲ್ಲಿ ಯಾವ ರೀತಿ ಬದಲಾಣಿಣೆಗಳಾಗಬೇಕು ಮತ್ತುತಿದ್ದುಪಡಿಗಳು, ನಾವು ಅನುಸರಿಸುತ್ತಿರುವಂಥ ಕ್ರಮ, ಇವುಗಳನ್ನೆಲ್ಲಾ ನೋಡಿ, ಇಡೀ ರಾಷ್ಟ್ರ, ಮಾನ್ಯ ಅಟಲ್ ಬಿಹಾರಿ ವಾಜಪೇಯಿ ರವರ ನೇತೃತ್ವದ ಭಾರತದ ಸರ್ಕಾರ ಇದನ್ನು ಎಲ್ಲಾ ಕಡೆ ವ್ಯಕ್ತಪಡಿಸಿ, Karnataka is a model. ಇದನ್ನು ಇಡೀ ರಾಷ್ಟ್ರದಲ್ಲೇ ಅಳವಡಿಸಬೇಕು ಎಂದು ಎಲ್ಲಾ ರಾಜ್ಯಕ್ಕೂ ಆದೇಶವನ್ನು ಕೊಟ್ಟಿದ್ದು, ಬಹುಶಃ ಅನಂತ್‌ಕುಮಾರ್‌ರವರೇನು ನಮ್ಮ ಬೆಂಗಳೂರು ನಗರದ ಲೋಕಸಭಾ ಸದಸ್ಯರಿದ್ದಾರೆ, ಅವರೇನು ಅರ್ಬನ್ ಡೆವಲಪ್‌ಮೆಂಟ್ ಮಂತ್ರಿಗಳಾಗಿ ಕೆಲಸ ಮಾಡಿದ್ದಾರೆ, ಅವರ ಮುಖಂಡತ್ವದಲ್ಲಿ ಇಡೀ ರಾಷ್ಟ್ರಕ್ಕೆ ಆದೇಶ ಹೋಗಿದೆ Bangalore is a big example. ಬೆಂಗಳೂರಿನಲ್ಲೇನು ಮಾಡುತ್ತಿದ್ದಾರೆ. ಆ ರೀತಿ ಮಾಡಬೇಕು. ಇಂತಿಂಥ ಕಾರ್ಯಕ್ರಮವನ್ನು ಅವರು ಇಟ್ಟುಕೊಂಡಿದ್ದಾರೆ ಎಂದು ಅವರು ಆದೇಶವನ್ನು ರಾಜ್ಯಗಳಿಗೆ ಕೊಟ್ಟಿದ್ದಾರೆ. ಇದರ ಜೊತೆಗೆ ನಾವು ಮಾಡುವಂಥ ಕೆಲಸದಲ್ಲಿ, ಏನಿವತ್ತು Self Assessment Scheme ನಲ್ಲಿ ಅವರೇನು ವಾದವನ್ನು ಮಾಡಿ, ಪರ, ವಿರೋಧ ಚಳುವಳಿ ಎಂದು ಹೇಳುತ್ತಿದ್ದಾರೆ. ಮೂಲಭೂತವಾಗಿ Urban Land Ceiling abolish ಆದಂಥ ಸಂದರ್ಭದಲ್ಲಿ ಇದನ್ನು ಉಳಿಸಿಕೊಳ್ಳಬೇಕು. ಖಾಲಿ ಜಾಗವನ್ನು ಬಿಟ್ಟುಕೊಳ್ಳಬಾರದು, ಇದಕ್ಕೆ ಏನಾದರೂ ಮಾಡಿ ತೆರಿಗೆ ಹಾಕಬೇಕೆಂದು ಆದೇಶವನ್ನು ಕೊಟ್ಟವರು ಯಾರು ಎಂಬ ಬಗ್ಗೆ ತಾವು ಮಾನ್ಯ ಅನಂತಕುಮಾರ್‌ರವರನ್ನು ಕೇಳಬೇಕಾಗುತ್ತದೆ. ಆ ಸರ್ಕಾರವೇ ಇದರ ಬಗ್ಗೆ ಚಿಂತನೆಯನ್ನು ಮಾಡಿ vacant land ಬಗ್ಗೆ taxನ್ನು ತಂದು Self Assessment Scheme ನ್ನು introduse ಮಾಡಬೇಕು ಎಮದು ತಂದ ಮೇಲೆ, ಇದರ ಬಗ್ಗೆ ಕೇಂದ್ರ ಸರ್ಕಾರ ನಮಗೆ ಕೊಟ್ಟಂಥ ಮಾರ್ಗದರ್ಶನದ ಮೇಲೆ, ಇಡೀ ರಾಷ್ಟ್ರದಲ್ಲಿ ಇದಕ್ಕೆ ತಿದ್ದುಪಡಿಯನ್ನು ತಂದು ಏನಾದರೂ ಮಾಡಿದ್ದೇವೆಂದರೆ ಮೊದಲನೆಯದ್ದು ಕರ್ನಾಟಕ ಸರ್ಕಾರ. ಇದನ್ನು ಮಾಡಿ ನಾವು ತಂದಂಥ ಅನೇಕ ತಿದ್ದುಪಡಿಯಲ್ಲಿ Self Assessment Scheme, Fund Based Accounting System ಪ್ರತಿಯೊಂದು ಹಂತದಲ್ಲೂ ಕೂಡ private, public participation ವಿಚಾರ ಮತ್ತು ನೀವು ಏನು stamp paper ವಿಚಾರದಲ್ಲಿ ಏನು reduction ಆಗಬೇಕೆಂದು ಪದವನ್ನು ಈ ಸಂದರ್ಭದಲ್ಲಿ ಬಳಸಿದಿರಿ, ಇದನ್ನೂ ಕೂಡ ಯಾವ ರಾಜ್ಯ ಮಾಡದಿದ್ದರೂ ಕರ್ನಾಟಕ ರಾಜ್ಯ ಚಾಚೂತಪ್ಪದೆ ಇದರ ಬಗ್ಗೆ ಚಿಂತನೆ ಮಾಡಿ, ಇದರಿಂದ ಅಂತರರಾಷ್ಟ್ರೀಯ ಮಟ್ಟದಲ್ಲೂ ಮೆಚ್ಚುಗೆಯನ್ನು ವ್ಯಕ್ತಪಡಿಸಿರುವ ಅನೇಕ ಪತ್ರಗಳು ಬಂದಿವೆ. ಮತ್ತು ಅನೇಕ ರಾಷ್ಟ್ರಗಳ

ಮುಖಂಡರುಗಳು ಬಂದು ಬೆಂಗಳೂರಿನಲ್ಲಿ ಮತ್ತು ಹೊರಗಡೆ ಹಳ್ಳಿಗಳಲ್ಲಿ ಆಗುತ್ತಿರುವ ಕೆಲಸಗಳ ಬಗ್ಗೆ ಮೆಚ್ಚುಗೆಯನ್ನು ವ್ಯಕ್ತಪಡಿಸಿದ್ದಾರೆ. ಚೆನ್ನಾಗಿ ಕೆಲಸವಾಗುತ್ತಿದೆಯೆಂದು ತಮ್ಮಗಳ ಮನಸ್ಸಿನ ಒಳಗಡೆ ಖುಷಿಯಾಗುತ್ತಿದೆ, ಮನಸ್ಸಿಗೆ ಬಹಳ ಸಮಾಧಾನವಿದೆ. ಆನಂದ ಕಾಣುತ್ತಿದೆ. ನಗುವೂ ಕಾಣುತ್ತಿದೆ. ಆದರೆ, ವಿರೋಧ ಪಕ್ಷದಲ್ಲಿದ್ದು ಸ್ವಲ್ಪ ವಿರೋಧ ಮಾಡಲಿಲ್ಲವೆಂದರೆ ನಿಮ್ಮ ಕರ್ತವ್ಯಕ್ಕೆ ಲೋಪ ಮಾಡಿದಂತಾಗುತ್ತದೆ. ಆದ್ದರಿಂದ ಇದನ್ನು ವಿರೋಧ ಮಾಡುತ್ತಿದ್ದೀರಿ. ಅದಕ್ಕೆ ನಾನೇನೂ ಬೇಜಾರು ಮಾಡಿಕೊಳ್ಳುವುದಿಲ್ಲ. ಆದರೆ, ನಾವು ಏನು ಕೆಲಸ ಮಾಡಿದ್ದೇವೆ, ಇದಕ್ಕೇನು ತಿದ್ದುಪಡಿಯನ್ನು ತಂದಿದ್ದೇವೆ, ಈ ತಿದ್ದುಪಡಿಯನ್ನು ನಾವು ತರಬೇಕೆಂದೇನಿಲ್ಲ, ಎಲ್ಲಾ ಸ್ನೇಹಿತರುಗಳು, ಮೇಲ್ಮನೆಯಲ್ಲಿ ಇದ್ದಂಥ ಅನೇಕ ಸ್ನೇಹಿತರುಗಳು, ಡಾ: ವಿ.ಎಸ್. ಆಚಾರ್ಯರವರ ಇರಬಹುದು, ಅವರೂ ಸಹ ಬಹಳ ಅಧ್ಯಯನ ಮಾಡಿದ್ದಾರೆ ನೀವು ಅಧ್ಯಯನ ಮಾಡಿದ್ದೀರಿ. ಬಹಳ ಸಂತೋಷ. ಬಹುಶಃ ನನಗಿಂತ ಜಾಸ್ತಿ ಅಧ್ಯಯನವನ್ನು ತಾವು ಮಾಡಿದ್ದೀರೆಂದು ಕಾಣುತ್ತದೆ. ನಮ್ಮ ಅಧಿಕಾರಿಗಳಿಗಿಂತ ಜಾಸ್ತಿ ಅಧ್ಯಯನವನ್ನು ತಾವು ಮಾಡಿದ್ದೀರಿ. ಬೇಕಾದಷ್ಟು ಸಂದರ್ಭದಲ್ಲಿ ಇಲ್ಲಿ ಆಗದೆ, ಸಹಾಯ ಸಿಕ್ಕದೇ ಇದ್ದ ತಕ್ಷಣವೇ ಎದುರುಗಡೆ ಇರುವ ಕೆಂಪು ಬಿಲ್ಡಿಂಗ್‌ಗೆ ಹೋಗಿ ಪ್ರಯತ್ನ ಮಾಡಿ, Public Litigationಗೆ ಹೋಗಿ ಅಲ್ಲಿ reject ಮಾಡಿಸಿಕೊಂಡು case fight ಮಾಡಿಸಿಕೊಂಡು ಬಂದಿದ್ದೀರಿ. in the democratic system ಇವೆಲ್ಲಾ ಬೇಕು. ಇದು ಆಗಬೇಕಾಗುತ್ತದೆ. ಆದರೆ, ನಾನು ಮಾನ್ಯ ಜಗದೀಶ್ ಶೆಟ್ಟರ್‌ರವರು ಹೇಳಿದಂತೆ ಈ ಕೇಸು ಏನಾಯಿತು, ಮತ್ತೊಂದು ಎನ್ನುವುದು, ಪಾಪ ಅವರು ಪ್ರತಿಪಾದನೆಮಾಡಿ ವಿಚಾರವನ್ನು ನೋಡಿದಾಗ, ನಾನು ಇಲ್ಲಿ ಮಾಹಿತಿಯನ್ನು ತರಿಸಿಕೊಂಡೆ. ಎಲ್ಲಾ ಕೇಸುಗಳು, ಇದ್ದಂಥ 700 ಕೇಸುಗಳು ಎಲ್ಲಾ ವಜಾ ಆಗಿ ಮತ್ತೆ ಏನು ಸರ್ಕಾರ, ಇವರೇನು ಶಾಸನವನ್ನು ಮಾಡಿದ್ದಾರೆ, ಇವರೇನು ಶಾಸನಕ್ಕೆ ಒಪ್ಪಿಗೆಯನ್ನು ಕೊಟ್ಟಿದ್ದಾರೆ ಇದು ಸರಿ ಎನ್ನುವುದನ್ನು ಈ ಸಂದರ್ಭದಲ್ಲಿ ಕೋರ್ಟ್ ಕೂಡ ಒಪ್ಪಿಕೊಂಡಿದೆ. ಕೆಲವು ಸಂದರ್ಭದಲ್ಲಿ, vacant land ವಿಚಾರದಲ್ಲಿ ಸ್ವಲ್ಪ ತಾರತಮ್ಯವಿದೆಯೆಂದು ನಾವೇ affidavit ನ್ನು file ಮಾಡಿದ್ದೇವೆ. ಸ್ವಲ್ಪ ಇದು ಬದಲಾವಣೆಯಾಗುತ್ತದೆ. ಮಲೆನಾಡು ಪ್ರದೇಶಕ್ಕೆ ಮತ್ತೊಂದು ಕಡೆ ಸ್ವಲ್ಪ ಬದಲಾವಣೆಯಾಗುತ್ತದೆ. ಆದ್ದರಿಂದ ಇವತ್ತು ನಾವೇ affidavit file ಮಾಡಿದ್ದೇವೆ. ಇಲ್ಲ ಎಂದು ಹೇಳುವುದಿಲ್ಲ.

ಶ್ರೀ ಎ. ರಾಮದಾಸ್ : ದಯವಿಟ್ಟು ರೆಕಾರ್ಡ್‌ಗೆ ತಪ್ಪು ಹೋಗಬಾರದು. ತಾವು ಹೇಳಿದ್ದನ್ನು ಒಪ್ಪಿಕೊಳ್ಳುತ್ತೇನೆ. ಇಲ್ಲಿ ನಾನು ಆಗಲೇ ಹೇಳಿದೆ. ರಿಟ್ ಪಿಟಿಷನ್ ನಂಬರ್ 2758 ಎಂದು ಹೇಳಿದೆ. ಇದರಲ್ಲಿ Public Interest Litigation ನಾನೇ ಏನು ನಗರಪಾಲಿಕೆ ಮತ್ತು ಸರ್ಕಾರದ ಎರುದ್ದವಾಗಿ ಏನು file ಏನು ಮಾಡಿದ್ದೆವು ಇಲ್ಲಿ ಏನೇನು ಅನಾಮಲೀಸ್ ಇದೆ ಎನ್ನುವುದು ಸದನದಲ್ಲಿ ಚರ್ಚೆಯಾಯಿತಲ್ಲಾ, ಇದರ ಪ್ರೊಸೀಡಿಂಗ್ಸ್‌ನೇ ಅಲ್ಲಿ ಕೊಟ್ಟಿದ್ದೆ. ಏನೇನಾಗಿದೆ ಎಂಬ ಬಗ್ಗೆ ಕೊಟ್ಟಿದ್ದೆ. ಅದರ ಬಗ್ಗೆ advocate General ಕೂಡ file ಮಾಡಿದ್ದಾರೆ. ಈಗ 45 Stamp Act ಏನಿದೆ ಇದು ಸುಪ್ರೀಮ್ ಕೋರ್ಟ್‌ನ Judgement ವಿರುದ್ಧವಾಗಿದೆ ಎಂದು ಏನಿದೆ ಇದೆಲ್ಲವನ್ನೂ ಅನಾಮಲೀಸ್ ಏನಿದೆ ಅದೆಲ್ಲವನ್ನೂ ಸರಿ ಮಾಡಿ ನ್ಯಾಯಾಲಯಕ್ಕೆ ಸಲ್ಲಿಸುತ್ತೇವೆಂದು ಹೇಳಿದ ಮೇಲೆ, ನನ್ನ ಕೇಸು ವಜಾ ಆಗಿಲ್ಲ, Judgement ಆಗಿದೆ.

ಶ್ರೀ ಜಗದೀಶ್‌ಶೆಟ್ಟರ್ : ತಾವೇನು ಕೆಲವೊಂದು ಕೇಸುಗಳು ವಜಾ ಆಗಿದೆಯೆಂದು ಹೇಳಿದ್ದೀರಲ್ಲಾ, ಅದರ ಬಗ್ಗೆ ತಮಗೆ ರಿಟ್ ಅಪೀಲ್ ನಂಬರನ್ನೂ ಹೇಳಿಬಿಡುತ್ತೇನೆ. ರಿಟ್ ಅಪೀಲ್ ನಂಬರ್ 3532/1996.

ಶ್ರೀ ಡಿ.ಕೆ. ಶಿವಕುಮಾರ್ : ರಿಟ್ ಪಿಟಿಷನ್ಸ್ ಎಲ್ಲಾ ವಜಾ ಆಗಿದೆ. ರಿಟ್ ಅಪೀಲ್ಸ್ ಹಾಗೆಯೇ ಇದೆ.

ಶ್ರೀ ಜಗದೀಶ್ ಶೆಟ್ಟರ್ : ಅದು ವಜಾ ಆದಮೇಲೆ ರಿಟ್ ಅಪೀಲ್ ಫೈಲ್ ಆಗಿದೆ. ಅನಂತರ ಹೊಸದಾದ ಆಕ್ಟ್ ಏನಿದೆ ಅದೂ ಅಪೀಲ್‌ನಲ್ಲಿ ಸ್ಟೇ ಆಗಿದೆ. ಅಂದರೆ ಕೇಸು ಇನ್ನೂ ಪೆಂಡಿಂಗ್ ಇದೆ. Appeal stage means that is also pending Proceedings ಎಂದರೆ ಇದು ಮುಗಿಯಲಿಲ್ಲ. original courtನಲ್ಲಿ ಮುಗಿದಿದೆ Write Appeal pending ಇದೆ. ತಡೆಯಾಜ್ಞೆಯಾಗಿದೆ. ಅದನ್ನೂ ತಾವು ದಯವಿಟ್ಟು ಸದನದ ಗಮನಕ್ಕೆ ತರಬೇಕು.

ಶ್ರೀ ಡಿ.ಕೆ. ಶಿವಕುಮಾರ್ : ರಿಟ್ ಅಪೀಲ್ ಪೆಂಡಿಂಗ್ ಇದೆ ಎಂಬುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದರೆ, ಇಲ್ಲಿ ನಾವು ಪ್ರತಿಯೊಂದು ತಂದಿರುವುದು, ಹಿಂದೆ ಏನು 2001ರಲ್ಲಿ ಚಿಮ್ಮನಕಟ್ಟಿಯವರಿದ್ದಾಗ ನೀವು ಪಾಸ್ ಮಾಡಿಕೊಟ್ಟಿದ್ದೀರಿ ಅದರಲ್ಲಿ ನಾವು ಮಾಡಿಫಿಕೇಷನ್, ಜನರ ಹತ್ತಿರ ಹೋಗಲು ನೀವೇನು ಸಲಹೆಯನ್ನು ಕೊಟ್ಟಿದ್ದಿರಿ, ಆ ಸಲಹೆಯನ್ನು ನಾವು ಇಲ್ಲಿ implement ಮಾಡಿದ್ದೇವೆ. ಆದಷ್ಟು ವೈಜ್ಞಾನಿಕವಾಗಿ ಇದನ್ನು ತಿಳಿದುಕೊಂಡು ನಾಗರೀಕರಿಗೆ ಯಾವ ರೀತಿಯಾಗಿ ಸಹಾಯ ಮಾಡಬಹುದು ಎಂದು ಈ ಸಂದರ್ಭದಲ್ಲಿ ಪ್ರಯತ್ನ ಮಾಡಿದ್ದೇವೆ.

ಸನ್ಮಾನ್ಯ ಅಧ್ಯಕ್ಷರು (ಶ್ರೀ ಎಂ.ವಿ ವೆಂಕಟಪ್ಪನವರು) ಅಧ್ಯಕ್ಷರು ಪೀಠವನ್ನು ಅಲಂಕರಿಸಿದರು)

ಉದಾಹರಣೆಗೆ, ಹಿಂದೆ ಏನು ತೆರಿಗೆ ಇತ್ತು, ಈಗ ಇರುವಂಥ ತೆರಿಗೆಗೂ.. ಹಿಂದೆ 0.03 ಇಂದ 0.06 ಇತ್ತು tax capital valueಗೆ 300 ರೂಪಾಯಿಗಳಿಂದ 600 ರೂಪಾಯಿ ಇತ್ತು. ಈಗ ಅದನ್ನು ಪಾಯಿಂಟ್ 3 ರಿಂದ ಪಾಯಿಂಟ್ 6 ಗೆ ಪ್ರಪೋಸ್ ಮಾಡಿ 300 ರಿಂದ 600ನ್ನು ಪ್ರತಿ ಹಂತದಲ್ಲೂ reduce ಮಾಡಿ ಅದನ್ನು 240 ಅಂದರೆ 60x40 site ವರೆಗೂ ಒಂದು ಕಟ್ಟಡವನ್ನು ಕಟ್ಟಿಕೊಂಡು ಉಳಿದಿರತಕ್ಕ ಖಾಲಿ ಜಾಗಕ್ಕೆ ನಾವು exemption ನ್ನು ಕೊಟ್ಟಿದ್ದೇವೆ. ಆದರೆ ಕೇಂದ್ರ ಸರ್ಕಾರವೇನು vacant landಗೂ ತೆರಿಗೆ ಹಾಕಬೇಕೆಂದು ಬಂದಿದ್ದರು, ಇದನ್ನು ಮಾನ್ಯ ಜಯಪ್ರಕಾಶ್‌ಹೆಗಡೆಯವರು ತಾವು ಅನೇಕರು ಹೇಳಿದಂತೆ vacant landಗೆ ಬಹುಶಃ ಬಹಳ ಕಡಿಮೆಯನ್ನು ನಾವು ಮಾಡಿದ್ದೇವೆ. ನಾವು greeneryಗೆ ಉತ್ತೇಜನವನ್ನು ಕೊಡಬೇಕೆಂದು ಅದನ್ನು ಕಡಿಮೆ ಮಾಡಿದ್ದೇವೆ. ಅದನ್ನು ಸ್ವಲ್ಪ ಅಧ್ಯಯನ ಮಾಡಿದರೆ, ಮಾನ್ಯ ರಾಮದಾಸ್‌ರವರು ಸ್ವಲ್ಪ ಅಧ್ಯಯನ ಮಾಡಿದರೆ, ಅದು ಯಾವ ರೀತಿ ಎಂದು calculations ಮಾಡಿ ಬಹಳ ಆಳವಾಗಿ ನೋಡಿದರೆ ತಮಗೇ ಅರ್ಥವಾಗುತ್ತದೆ. ಇಲ್ಲಿ ನಾನು ಪ್ರತಿಯೊಂದರ ಬಗ್ಗೆ ಬಿಡಿಸಿ/ಬಿಡಿಸಿ ಹೇಳಿದರೆ ಸಮಯ ಬಹಳ ತೆಗೆದುಕೊಳ್ಳುತ್ತದೆ. ಆದ್ದರಿಂದ vacant landಗೆ tax ನ್ನು ಆದಷ್ಟು ಜಾಸ್ತಿ ಕಡಿಮೆ ಮಾಡಿದ್ದೇವೆ. ಹಸಿರು ಜಾಸ್ತಿ ಆಗಬೇಕು ಎಂಬುದು ಆಸೆಯೂ ಆಗಿದೆ. ಆದರೆ ಈ ಜಮೀನನ್ನು ನೀವು facilities ಅಥವಾ ಮತ್ತೊಂದನ್ನು ಕಾರ್ಪೊರೇಷನ್‌ಗಳು ಉಪಯೋಗಿಸುವಂತಹ ಸಂದರ್ಭದಲ್ಲಿ ಅವರಿಗೆಲ್ಲಾ facilities ಕೊಟ್ಟಂತಹ ಸಂದರ್ಭದಲ್ಲಿ ಒಂದು ನಾಮಿನಲ್ಲಾಗಿ ಟ್ಯಾಕ್ಸ್ ಹಾಕದಿದ್ದರೆ ಅದಕ್ಕೆ ಬೆಲೆಯೇ ಬರುವುದಿಲ್ಲ. ಅದಕ್ಕೋಸ್ಕರ ಈ ಹಿನ್ನೆಲೆಯಲ್ಲಿ ನಾವು ಏನು ಈ ಒಂದು ಸಿಸ್ಟಮ್ ಅನ್ನು ತಂದಿದ್ದೇವೋ, ಇದು ತನಗೆ ತಾನೇ ಡಿಕ್ಲೇರ್ ಮಾಡಿಕೊಳ್ಳುವಂತಹ ವಿಚಾರ ಇದರಲ್ಲಿದೆ. ಯಾವ ಅಧಿಕಾರಿಯೂ ಕೂಡ ಇದರಲ್ಲಿ

ಗೋಲ್‌ಮಾಲ್ ಮಾಡಲಿಕ್ಕೆ 0.3 ಯಿಂದ 06 ಪರ್ಸೆಂಟ್‌ಗೆ ಹೋಗಿ ಮಾಡುವಂತಹ ಸಂದರ್ಭಗಳು ಇಲ್ಲಿ ಎಲ್ಲಿಯೂ ಕೂಡ ಇಲ್ಲ. ಹಿಂದೆ ರೆವಿನ್ಯೂ ಅಫೀಸರ್ಸ್ ಬೇಕಾದವನಿಗೆ ಒಂದು ತರಹ ಮಾಡುತ್ತಿದ್ದರು, ಬೇಡವಾದವನಿಗೆ ಇನ್ನೊಂದು ತರಹ ಮಾಡುತ್ತಿದ್ದರು. ಅಂತಹ ತಾರತಮ್ಯ ಮಾಡುತ್ತಿದ್ದಾರೆ ಎಂಬ ದೂರುಗಳಿದ್ದವು. ದುಡ್ಡು ಕೊಡುವುದು, ಅಪೀಲ್ ಮಾಡುವುದು, ಅಸೆಸಿಂಗ್ ಅಫೀಸರ್ಸ್ ಇವೆಲ್ಲವುಗಳನ್ನು ತಪ್ಪಿಸಬೇಕೆಂದು, ಇನ್‌ಕಂ ಟ್ಯಾಕ್ಸ್ ಅನ್ನು ನಾವು ಯಾವ ರೀತಿಯಲ್ಲಿ ಫೈಲ್ ಮಾಡುತ್ತೇವೆಯೋ ಅದೇ ರೀತಿಯಲ್ಲಿ ತಾನೇ ತನ್ನ ಆಸ್ತಿ ಮೇಲೆ ಎಷ್ಟು ತೆರಿಗೆ ಕಟ್ಟಬೇಕು ಎಂದು ಆ ಸಿಸ್ಟಮ್‌ನಲ್ಲಿ ಘೋಷಣೆ ಮಾಡಲಿಕ್ಕೆ ನಾವು ಒಂದು ಅವಕಾಶವನ್ನು ಮಾಡಿಕೊಟ್ಟಿದ್ದೇವೆ. ಆ ಒಂದು ಸಿಸ್ಟಮ್‌ನಲ್ಲಿ ಏನೊಂದು ಟ್ಯಾಕ್ಸ್ ರೇಟ್ ಫಿಕ್ಸೇಷನ್ ಇದೆಯೋ, ಅದನ್ನು ಸುಮ್ಮ ಸುಮ್ಮನೆ ಡೆಪ್ಯುಟಿ ಕಮೀಷನರ್ ಬದಲಾವಣೆ ಮಾಡಲಿಕ್ಕೆ ಸಾಧ್ಯವಿಲ್ಲ. ಈ ಅಧಿಕಾರವನ್ನು ನಾವು ಇಟ್ಟುಕೊಂಡಿಲ್ಲ. ಕಾರ್ಪೊರೇಷನ್‌ರವರು ಟ್ಯಾಕ್ಸ್ ಅನ್ನು ಫಿಕ್ಸ್ ಮಾಡಲಿಕ್ಕೆ ಇಲ್ಲಿ ಅವಕಾಶ ಇಲ್ಲ. ಆಕ್ಟೇ ಟ್ಯಾಕ್ಸ್ ಅನ್ನು ಫಿಕ್ಸ್ ಮಾಡಿದೆ. ಈ ಒಂದು ಬೆಲೆ ಮೇಲೆ, ಯಾವ ಬೆಲೆಗೆ ಏನಾಗಬೇಕು ಎಂಬ ಬಗ್ಗೆ ಹಾಗೂ ತಮಗೆ ಇದರಲ್ಲಿ ವ್ಯತ್ಯಾಸಗಳು ಏನಾದರೂ ಕಂಡು ಬಂದರೆ, ಮುಂದುಗಡೆ ರೋಡಿಗೆ ಒಂದು ಬೆಲೆ ಇದೆ, ಹಿಂದುಗಡೆ ರೋಡಿಗೆ ಬೇರೆ ಇದೆ, ದೂರದ ಪ್ರದೇಶಕ್ಕೆ ಹೆಚ್ಚು ಕಡಿಮೆ ಇದೆ ಎನ್ನುವುದಾದರೆ, ಅದರ ಬಗ್ಗೆ ನೀವೇ ಜಿಲ್ಲಾಧಿಕಾರಿಗಳ ಮುಂದೆ ಹೋಗಿ ಅಬ್ಜೆಕ್ಷನ್ ಫೈಲ್ ಮಾಡಿ, ಈ ಬೆಲೆ ಕಡಿಮೆ ಇದೆ, ಈ ಬೆಲೆ ಜಾಸ್ತಿ ಇದೆ ಎಂದು ಕೇಳಿ ತಾವು ಹೋರಾಟ ಮಾಡಲಿಕ್ಕೆ ಪ್ರತಿಪಾದನೆ ಮಾಡಲಿಕ್ಕೆ ಎಲ್ಲಾ ತರಹದ ಅವಕಾಶ ಇದೆ. ಪ್ರಥಮ ಹಂತದಲ್ಲಿ ಇದು ಸ್ವಲ್ಪ ಕಷ್ಟವಾಗಿ ಕಾಣಬಹುದು. ನಿಜ, ಇದು ಹೊಸದು, ಇದು ಹೊಸ ಸಿಸ್ಟಮ್. ಇದರಲ್ಲಿ ಕೆಲವರಿಗೆಲ್ಲಾ ಬಹಳ ಏನೇನೋ ವ್ಯತ್ಯಾಸಗಳು ಕಾಣುತ್ತವೆ. ಆದರೆ ದೂರದೃಷ್ಟಿಯಿಂದ ಲೆಕ್ಕ ಹಾಕಿಕೊಂಡರೆ, ಇದರಿಂದ ನಾಗರಿಕರಿಗೂ ಅನುಕೂಲ, ಕಾರ್ಪೊರೇಷನ್‌ಗೂ ಅನುಕೂಲ. ಇದರಲ್ಲಿ ಸರ್ಕಾರದ ಪಾತ್ರವೇನಿಲ್ಲ. ಸರ್ಕಾರ ಇದಕ್ಕೊಂದು ಫ್ರೇಮ್ ಮಾಡಿ, ಈ ಫ್ರೇಮ್‌ನಲ್ಲಿ ನೀವೆಲ್ಲಾ ಹೋಗಬೇಕೆನ್ನುವುದನ್ನು ಒಂದು ಮಾದರಿಯಾಗಿ ಇವತ್ತು ಚಿಂತನೆ ಮಾಡಿದ್ದೇವೆಯೇ ಹೊರತು ಇದರಲ್ಲಿ ನಾವೇನು ಹಸ್ತಕ್ಷೇಪ ಮಾಡಿಲ್ಲ. ಇಲ್ಲಿ ಆಕ್ಟ್ ಅನ್ನು ಇಂಪ್ಲಿಮೆಂಟ್ ಮಾಡಬೇಕೆನ್ನುವ ವಿಚಾರವನ್ನು ನಾವು ತಂದಿದ್ದೇವೆ. ಒಂದು ಮುನಿಸಿಪಾಲಿಟಿ ಬೇಕು ಎಂದು ಹೇಳುತ್ತಾರೆ. ಇನ್ನೊಂದು ಮುನಿಸಿಪಾಲಿಟಿ ಬೇಡ ಎಂದು ಹೇಳುತ್ತಾರೆ. ಇನ್ನೊಬ್ಬರು ಇನ್ನೊಂದು ತರಹ ರೆಸಲ್ಯೂಷನ್ ಮಾಡುತ್ತಾರೆ, ಅದಕ್ಕೆಲ್ಲಾ ನಾವು ಅವಕಾಶ ಕೊಡಲಿಕ್ಕಾಗುವುದಿಲ್ಲ. ಬೆಂಗಳೂರಿನಲ್ಲಿ ಏನೊಂದು ಕಾನೂನನ್ನು ನಾವು ಮಾಡಿದ್ದೇವೆಯೇ ಮಂಗಳೂರಿಗೂ ಅದೇ ಕಾನೂನು ಅನ್ವಯಿಸುತ್ತದೆ. ಬೆಂಗಳೂರಿನಲ್ಲಿ ಏನು ಕಾನೂನು ಇದೆಯೋ ಗುಲ್ಬರ್ಗಾದಲ್ಲೂ ಅದೇ ಕಾನೂನು ಇದೆ. ಬೆಂಗಳೂರಿನಲ್ಲಿ ಏನು ಕಾನೂನು ಇದೆಯೋ ಈ ರಾಜ್ಯದ ಮೂಲೆಯಲ್ಲಿರುವಂತಹ ನಗರಕ್ಕೂ ಅದೇ ಕಾನೂನು ಇದೆ. ಇಲ್ಲೇನೂ ವ್ಯತ್ಯಾಸ ಇಲ್ಲ. ಆದರೆ ಇಲ್ಲಿ ಏನೊಂದು ಬೆಂಗಳೂರು ಸಿಟಿ ವಿಚಾರದಲ್ಲಿ ಅಪೀಲ್ ಆಗಿ, ಅಲ್ಲಿ ಕೆಲವು ನಮ್ಮ ಬಾಡಿಗೆ ಲೆಕ್ಕದಲ್ಲೂ ಕೂಡ ಈ ಎರಡು ವರ್ಷದ ಮಟ್ಟಿಗೆ, ಅಲ್ಲಿ ಕೂಡ ಕೋರ್ಟಿಗೆ ಹೋಗಿ ಇದನ್ನು, ಕೆಲವು ಸಂದರ್ಭಗಳಲ್ಲಿ ಬಾಡಿಗೆ ಜಾಸ್ತಿ ಇದೆ, ವ್ಯಾಲ್ಯೂ ಕಡಿಮೆ ಇದೆ, ಆ ಒಂದು ಹಿನ್ನೆಲೆಯಲ್ಲಿ ಕೆಲವೊಂದು ಪೀರಿಯಡ್ ಅನ್ನು ಬೆಂಗಳೂರು ಸಿಟಿಯಲ್ಲಿ ಸ್ವಲ್ಪ ಫಿಕ್ಸ್ ಮಾಡಲಾಗಿದೆಯೇ ಹೊರತು, ಬೇರೆ ಇನ್ನೇನೂ ಅವರಿಗೂ ಇವರಿಗೂ ಬೇರೆ ಬೇರೆ ತಾರತಮ್ಯವನ್ನು ಮಾಡಲಿಕ್ಕೆ ಸಾಧ್ಯವಿಲ್ಲ. ಏಕೆಂದರೆ, ಈ ಒಂದು ಸಿಸ್ಟಮ್‌ನಿಂದ

ಮೊದಲು ಅವರೇನೊಂದು ಟ್ಯಾಕ್ಸ್ ಅನ್ನು ಕಟ್ಟುತ್ತಿದ್ದರೋ ಅದು ಕಡಿಮೆಯಾಗಿ ಹೋಗಿತ್ತು. ಕೆಲವು ಕಡೆ ಇಲ್ಲಿ ಚದರಕ್ಕೆ 40 ರೂಪಾಯಿಗಳನ್ನು ಕಟ್ಟುತ್ತಾರೆ. 40 ರೂಪಾಯಿಗೆ ಒಂದು ಚದರ, 50 ರೂಪಾಯಿ, 60 ರೂಪಾಯಿ, 100 ರೂಪಾಯಿಗಳ ಬಾಡಿಗೆಯನ್ನು ಒಂದು square feet ಗೆ ಇಲ್ಲಿ ಕಟ್ಟುತ್ತಾರೆ. 100 ರೂಪಾಯಿಗಳನ್ನು ಕಟ್ಟುವವರಿಗೂ ಆ ಸಿಸ್ಟಮ್ ಮೇಲೆ, ಆ ವ್ಯಾಲ್ಯೂ ಮೇಲೆ ಲೆಕ್ಕ ಹಾಕಿಕೊಂಡಾಗ ಅವರು ಮೊದಲು ಒಂದು ಲಕ್ಷ ರೂಪಾಯಿಗಳನ್ನು ಕಟ್ಟುತ್ತಿದ್ದರೆ, ಈಗ ಬರೀ ಹತ್ತು ಸಾವಿರ ರೂಪಾಯಿಗಳಿಗೆ ಬಂದು ಬಿಟ್ಟಿತ್ತು. ಅಂತಹ ಒಂದು ಪರಿಸ್ಥಿತಿ ಇತ್ತು. ಆ ಹಿನ್ನೆಲೆಯಲ್ಲಿ, ಅವರ ಬಾಡಿಗೆಯನ್ನು ಲೆಕ್ಕ ಹಾಕಿಕೊಂಡು ಸ್ವಲ್ಪ ಇದನ್ನು extension ಮಾಡಿಕೊಳ್ಳಲಿಕ್ಕೆ ಇದನ್ನು 1.5 ಪರ್ಸೆಂಟ್‌ವರೆಗೂ ಇದನ್ನು ಏರಿಸಲಿಕ್ಕೆ ಅವಕಾಶ ಮಾಡಿಕೊಟ್ಟಿದ್ದೇವೆಯೇ ಹೊರತು, ಇಲ್ಲಿ ನಾವು ಒಬ್ಬರಿಗೆ ಒಂದು ಮಾಡಿ, ಇನ್ನೊಬ್ಬರಿಗೆ ಇನ್ನೊಂದು ಮಾಡುವಂತಹ ಪ್ರಶ್ನೆ ಈ ಸಂದರ್ಭದಲ್ಲಿ ಇಲ್ಲ. ವಾಟರ್ ಸೆಸ್ ಸೆಟ್ ಬ್ಯಾಕ್ ವಿಚಾರದಲ್ಲಿ, ಅಲ್ಲೂ ಕೂಡ, ಬಿಲ್ಡಿಂಗ್ ಅನ್ನು ಎಷ್ಟು ಜಾಗದಲ್ಲಿ ಕಟ್ಟಿದೆ? ಉಳಿದುಕೊಂಡಿರುವ ಪ್ರದೇಶ ಎಷ್ಟು ಎಂಬುದನ್ನೂ ಕೂಡ ಅವರವರೇ ಡಿಕ್ಲೇರ್ ಮಾಡಿಕೊಳ್ಳುತ್ತಾರೆ. ನಾವೂ ಕೂಡ ಇಲ್ಲಿ ಬೆಂಗಳೂರು ನಗರದಲ್ಲಿ G.I.S ಜಾರಿಗೆ ತರುವ ಬಗ್ಗೆ ಚಿಂತನೆ ನಡೆಯುತ್ತಿದೆ. ಹಾಸನದಲ್ಲಿ ನಾವು ಒಂದು ಹೊಸ ಪದ್ಧತಿಯಾಗಿರುವ G.I.S. ಅನ್ನು ಅನ್ನು ಜಾರಿಗೆ ತಂದಿದ್ದೇವೆ. ಅಲ್ಲಿಯ ಶಾಸಕರಾದ ಮಾನ್ಯ ಹನುಮೇಗೌಡರು ಸದನದಲ್ಲಿ ಇಲ್ಲವೆಂದು ಕಾಣುತ್ತದೆ. ಈ 31 ನಗರಗಳೇನಿದೆ, ಆ ನಗರಗಳಲ್ಲಿ ನಾವೇನು ನಿರ್ಮಲ ನಗರ ಸ್ಕೀಮ್ ಎಂದರೇನು ಮಾಡಿದ್ದೇವೆಯೋ ಅಲ್ಲೆಲ್ಲಾ ಇದನ್ನು ಅಳತೆ ಮಾಡುವಂತಹ ವ್ಯವಸ್ಥೆಯುಳ್ಳ G.I.S. ಸಿಸ್ಟಮ್ ಅನ್ನು ಮಾಡಿದ್ದೇವೆ. ಇಡೀ ಪ್ರಪಂಚದಲ್ಲಿ ಇದು ಎಲ್ಲಿಯೂ ಇಲ್ಲ. ಇವತ್ತು ಕೇಂದ್ರ ಸರ್ಕಾರದವರು ನಮಗೆ, ಇದಕ್ಕೆ ನಾವು ಹೆಚ್ಚಿಗೆ ಹಣವನ್ನು ಕೊಡುತ್ತೇವೆ, ಇದನ್ನು ಜಾರಿಗೆ ತನ್ನಿ, ನೀವೊಂದು ಒಳ್ಳೆಯ ಕೆಲಸವನ್ನು ಮಾಡಿದ್ದೀರಿ, ಇಂತಹ ಕೆಲಸವನ್ನು ಮಾಡಬೇಕು, ಈ G.I.S. ಮಾಡಿ ಎಂದು ಹೇಳಿದ್ದಾರೆ. ಈ G.I.S ಅನ್ನು ನಾವು ಜಾರಿಗೆ ತಂದಾದ ನಮ್ಮ ಹತ್ತಿರ ಎಲ್ಲಾ ತರಹದ ದಾಖಲೆಗಳು ಇರುತ್ತವೆ. ಯಾರಾದರೂ ಹೋಗಿ ಅದರ ಬಗ್ಗೆ ತಪ್ಪು ಮಾಹಿತಿಯನ್ನೇನಾದರೂ ಕೊಟ್ಟರೆ, ತಪ್ಪು affidavit ಕೊಟ್ಟರೆ, ಅಲ್ಲೇ ಇರುವಂತಹ ನಮ್ಮ ಸರ್ವೆ ಸಿಸ್ಟಮ್‌ನಲ್ಲೇ ಇದಕ್ಕೆ ಎಷ್ಟು ಕಟ್ಟಬೇಕು? ಏನು ಮಾಡಬೇಕು ಎನ್ನುವಂತಾದ್ದು ಅಲ್ಲೇ ಬರುತ್ತದೆ. ಆದ್ದರಿಂದ ಯಾರೂ ಇದರಿಂದ ತಪ್ಪಿಸಿಕೊಳ್ಳಲಿಕ್ಕೆ ಸಾಧ್ಯವೇ ಇಲ್ಲ. ಅಂತಹ ಒಂದು ವಿನೂತನವಾದ, ಇಡೀ ರಾಷ್ಟ್ರದಲ್ಲೇ ಎಲ್ಲೂ ಇಲ್ಲದೇ ಇರುವಂತಹ ಒಂದು ಪದ್ಧತಿ ಈ ರಾಜ್ಯದಲ್ಲಿ ಮಾನ್ಯ ಎಸ್.ಎಂ. ಕೃಷ್ಣರವರ ನಾಯಕತ್ವದಲ್ಲಿ ಪ್ರಾರಂಭವಾಗುತ್ತಿದೆ. ಇದನ್ನು ನಾನು ಹೊಗಳಿಕೆಗೆ ಅಥವಾ ಚುನಾವಣಾ ವಿಚಾರಕ್ಕಾಗಿ ಹೇಳುತ್ತಿಲ್ಲ. ಇದೊಂದು ಸಿಸ್ಟಮ್, ಈ ಸಿಸ್ಟಮ್ ಅನ್ನು ಈ ಸಂದರ್ಭದಲ್ಲಿ ತರಲಿಕ್ಕೆ ನಾವು ಪ್ರಯತ್ನ ಮಾಡುತ್ತಿದ್ದೇವೆ. ಇನ್ನು 5 ಪರ್ಸೆಂಟ್ ರಿಬೇಟ್ ಬಗ್ಗೆ ಹೇಳುವುದಾದರೆ, ತಮಗೆ ಇದರ ಬಗ್ಗೆ ಅರ್ಥವಾಗಿಲ್ಲವೆಂದು ಕಾಣುತ್ತದೆ. ಮೊದಲು ಕೋರ್ಟ್ ಕಛೇರಿಗಳಿಗೆ ಹೋಗಬಹುದಾಗಿತ್ತಲ್ಲಾ, ಈ ಕೋರ್ಟ್–ಕಛೇರಿಗಳಿಂದಾಗಿ ಕೆಲವರು ಕಟ್ಟಿದರು, ಕೆಲವರು ಕಟ್ಟಲಿಲ್ಲ. ಆದ್ದರಿಂದ ಕಟ್ಟಲು ಮುಂದಕ್ಕೆ ಬರುವಂತಹವರಿಗೆ, 2001, 2002 ಮತ್ತು 2003ನೇ ವರ್ಷಗಳಲ್ಲಿ ಕಟ್ಟಲಿಲ್ಲವೆಂದರೆ, ಅವರಿಗೆ penalty, ಮತ್ತೊಂದು ಇತ್ಯಾದಿ clause ಗಳೆಲ್ಲಾ ಇದ್ದೇ ಇತ್ತಲ್ಲಾ, ಅದರ ಬಗ್ಗೆ ಕೆಲವರು ಕೋರ್ಟಿಗೆ ಹೋಗಿದ್ದರು, ಎಷ್ಟೋ ಜನ ಕೋರ್ಟ್‌ಗೆ ಹೋದವರು ಟ್ಯಾಕ್ಸ್

ಅನ್ನೇ ಕಟ್ಟಿಲ್ಲ. ಆದ್ದರಿಂದ ಈ ನಮ್ಮ ordinance ನಲ್ಲಿ ಆಗಸ್ಟ್‌ವರೆಗೆ ನಾವು ತಂದೆವು. ಆಗಸ್ಟ್ ಆಗಲೇ ಮುಗಿದು ಹೋಗುತ್ತಾ ಬಂದಿದೆ. ಆದ್ದರಿಂದ ಸೆಪ್ಟೆಂಬರ್ 30ರವರೆಗೆ ನೀವು ಪ್ರಾಮಾಣಿಕವಾಗಿ ಇಷ್ಟು ಟ್ಯಾಕ್ಸ್ ಅನ್ನು ಕಟ್ಟಿದರೆ, ನಿಮಗೊಂದು 5% rebate ಕೊಡುತ್ತೇವೆ, ಬಹುಮಾನದ ರೀತಿಯ ಒಂದು ಅವಕಾಶವನ್ನು ನಾವು ಇದರಲ್ಲಿ ಮಾಡಿಕೊಟ್ಟಿದ್ದೇವೆ. ಈ ರಿಬೇಟೂ ಕೂಡ ಬೇಡ ಎನ್ನುವುದಾದರೆ, ಅದಕ್ಕೆ ನಾನೇನೂ ಮಾಡಲಿಕ್ಕೆ ಸಾಧ್ಯವಿಲ್ಲ. ಈ ಮೂಲಕ ನಾವು ಜನರಿಗೇ ಅನುಕೂಲ ಮಾಡಿಕೊಟ್ಟಿದ್ದೇವೆ. ನಿಮ್ಮ ಸಲಹೆಯನ್ನು ನಾವು ಕೇಳುತ್ತೇವೆ. ನಾವೇನು ಹೊಸದಾಗಿ ಬದಲಾವಣೆ ಮಾಡಿಲ್ಲ. ಅದನ್ನು ತಾವು ಯಾವ ರೀತಿಯಾಗಿ ಅರ್ಥ ಮಾಡಿಕೊಂಡರೋ ನನಗಂತೂ ಅರ್ಥವಾಗುತ್ತಿಲ್ಲ. ಆದ್ದರಿಂದ ಅದೊಂದು exemption ಅನ್ನು ನಾವು ಇದರಲ್ಲಿ ಮಾಡಿದ್ದೇವೆ. ಇಲ್ಲಿ ಟೆಂಡರ್ ಅನ್ನು accept ಮಾಡಿಕೊಳ್ಳಲಿಕ್ಕೆ, ಪ್ರತಿ ಹಂತದಲ್ಲೂ ಟೆಂಡರ್ ಮಾಡಲಿಕ್ಕೆ ಮತ್ತು ವಾಟರ್ ಸೆಸ್, ಯಾವ ಕಾಲದಲ್ಲಿತ್ತು? ಈ ವಾಟರ್ ಸೆಸ್ ಬಗ್ಗೆ ಬೇಕಾದಷ್ಟು ವಾದ ವಿವಾದ ನಡೆದಿದೆ. 20% water cess ಏನಿತ್ತೋ ಅದನ್ನು ಕಂಪ್ಲೀಟ್ ಆಗಿ ನಾವು ಅಬಾಲಿಷ್ ಮಾಡಿದ್ದೇವೆ. ಏಕೆಂದರೆ ಇದಕ್ಕೆ ಬೇರೆ organisations ಇವೆ. ಅದೇ ಬೇರೆ organisation, ಅದನ್ನು ನೋಡಿ ಲೆಕ್ಕಾಚಾರ ಮಾಡಿಕೊಂಡು, privisation ಇದೆಲ್ಲಾ ಬರುತ್ತಿದ್ದಂತಹ ಸಂದರ್ಭದಲ್ಲಿ ಈ ಕಾರ್ಪೊರೇಷನ್‌ಗೆ ಈ ಒಂದು ಕೆಲಸ ಬೇಡವೆಂದು ನಾವು ಇದನ್ನು ಇವತ್ತು ಅಬಾಲಿಷ್ ಮಾಡಿದ್ದೇವೆ. ಇನ್ನು trade license ವಿಚಾರದಲ್ಲಿ ಪ್ರತಿ ವರ್ಷಕ್ಕೂ ಹೋದರೆ ಅವನಿಗೆ ಬೇಕಾದಷ್ಟು ಕಿರುಕುಳ ಆಗುತ್ತಿತ್ತು. ಒಂದೊಂದು ವರ್ಷಕ್ಕೂ ಇನ್ಸ್‌ಪೆಕ್ಟರ್ ಹತ್ತಿರ ಹೋಗಬೇಕು, ಹೋದ ತಕ್ಷಣ ಅವನಿಗೆ ಲಂಚ ಕೊಡಬೇಕು, ಮತ್ತೊಂದು ಮಾಡಬೇಕು, ಇವೆಲ್ಲಾ ನೀವೇ ಹೇಳುತ್ತಿದ್ದಿರಿ. ಇದನ್ನು ತಪ್ಪಿಸಬೇಕೆಂದು, ನಿಮ್ಮ ವರ್ತಕರಿಗೆ ತಪ್ಪಿಸಬೇಕು, ನಮ್ಮ ವರ್ತಕರಿಗೆ ತಪ್ಪಿಸಬೇಕು ಎಂದು, ಐದು ವರ್ಷಕ್ಕೊಂದು ಸಾರಿ ಅವನು ಹೋಗಿ ಕೊಟ್ಟ ತಕ್ಷಣ, ಮೂರೇ ದಿವಸದಲ್ಲಿ ಅವನಿಗೆ ಲೈಸೆನ್ಸ್ ರಿನ್ಯೂವಲ್ ಮಾಡಿಕೊಡಬೇಕು. ಅಂತಹ ಒಂದು ಪದ್ಧತಿಯನ್ನು ನಾವು ಜಾರಿಗೆ ತರುತ್ತಿದ್ದೇವೆ. ಹಿಂದೆ ಲೈಸೆನ್ಸ್ ಕೊಡದೇ ಅವರಿಗೆ ಬೇಕಾದಷ್ಟು ಕಿರುಕುಳಗಳನ್ನು ಕೊಡುತ್ತಿದ್ದರು. This is the most friendly Act. ಇದರಿಂದಾಗಿ ವರ್ತಕರು ಬಹಳಷ್ಟು ಖುಷಿ ಪಡುತ್ತಿದ್ದಾರೆ. ಏಕೆಂದರೆ, ಅವರು ಇದಕ್ಕಾಗಿ ಪ್ರತಿ ವರ್ಷವೂ ಕಾರ್ಪೊರೇಷನ್‌ಗೆ ಹೋಗಿ ಮೂರು ತಿಂಗಳ ಮುಂಚಿತವಾಗಿಯೇ ಅಲ್ಲಿ ಅರ್ಜಿ ಕೊಡಬೇಕಾಗಿತ್ತು, ಅವನಿಗೆ ಕಿರುಕುಳ, ನೋಟೀಸ್, ಮತ್ತೊಂದು, ಕಾರ್ಪೊರೇಷನ್‌ಗಳಲ್ಲಿ ಇರುವಂತಹ ಕಾರ್ಪೋರೇಟರ್‌ಗಳು, ಸಮಸ್ಯೆಗಳು ಬೇಕಾದಷ್ಟು ಇತ್ತು. ಇದನ್ನೆಲ್ಲಾ ತಪ್ಪಿಸಬೇಕೆಂದು ಇವತ್ತಿನ ದಿವಸ ಒಂದು ವರ್ಷಕ್ಕೊಮ್ಮೆ ಹೋಗಿ ಅವನು ಮಾಡುವ ಬದಲು ಐದು ವರ್ಷಕ್ಕೆಂದು ನಾವು ಮಾಡಿದ್ದೇವೆ. ಅದನ್ನು ನಾವು ನೋಡುತ್ತೇವೆ, agreement ಮತ್ತೊಂದು ಎಷ್ಟು ವರ್ಷಕ್ಕೆ ಇರುತ್ತದೆ, ಬಾಡಿಗೆ ಏನು? ಒಂದು ವರ್ಷಕ್ಕೆ agreement ಇತ್ತು ಎನ್ನುವುದಾದರೆ, ಅವನಿಗೆ ಐದು ವರ್ಷಕ್ಕೆ ನಾವು ಲೈಸೆನ್ಸ್ ಕೊಡಲಿಕ್ಕೆ ಸಾಧ್ಯವಿಲ್ಲ. ಕೆಲವರು ಸ್ವಂತ ಅಂಗಡಿಯನ್ನು ಇಟ್ಟುಕೊಂಡಿರುತ್ತಾರೆ. ಕೆಲವರು ಲೀಸ್ ಮೇಲೆ ತೆಗೆದುಕೊಂಡಿರುತ್ತಾರೆ. ಇದನ್ನೆಲ್ಲಾ ಗಮನದಲ್ಲಿಟ್ಟುಕೊಂಡು ವಿಶೇಷವಾದ ಸಂದರ್ಭವನ್ನು, ಈ ಒಂದು ಅವಕಾಶವನ್ನು ನಾವು ತಂದಿದ್ದೇವೆ. Divisional Commissioners ಏನೊಂದು ಪವರ್ಸ್ ಇತ್ತೋ, ಆ ಪವರ್ಸ್ ಅನ್ನು, ಕೆಲವು ಕಡೆ standing committee ಗೆ ಇತ್ತು, ಅದನ್ನೂ ಕೂಡ ಇವತ್ತು ಡೆಲಿಗೇಟ್ ಮಾಡಿ Deputy Commissionerಗೆ ನಾವು ಕೊಟ್ಟಿದ್ದೇವೆ.

ಅನೇಕ ಅಪೀಲ್‌ಗಳು ಇದ್ದಂತಹ ಸಂದರ್ಭದಲ್ಲಿ ಅದನ್ನು ಕೂಡ, ಕೋರ್ಟಿನ ಜಡ್ಜ್‌ಮೆಂಟಿನ ಆಧಾರದ ಮೇಲೆ, ಪ್ರಜಾಪ್ರಭುತ್ವವನ್ನು ಮೊಟಕು ಮಾಡುವಂತಹ ಪ್ರಶ್ನೆ ಇಲ್ಲಿ ಇಲ್ಲ, ಪ್ರಜಾಪ್ರಭುತ್ವದಲ್ಲಿ ನಮಗೆ ಒಂದು ನಂಬಿಕೆ ಇದೆ. ರಾಜೀವ್ ಗಾಂಧಿಯವರ 73 ಮತ್ತು 74ರ ಅಡಿಯಲ್ಲಿನ ತತ್ವ, ಸಿದ್ಧಾಂತವನ್ನು ಒಪ್ಪಿಕೊಂಡು ನಾವು ಅದನ್ನು ನಮ್ಮ ಮೈಯಲೆಲ್ಲಾ ಅಳವಡಿಸಿಕೊಂಡಿರುವವರು ನಾವು. ಈಗ ಇರುವಂತಹ ಸಂದರ್ಭದಲ್ಲಿ ಹೆಚ್ಚಿಗೆ ನಾವು ಜನರಿಗೆ ಹೆಚ್ಚಿಗೆ ಶಕ್ತಿ ಕೊಡಬೇಕೆನ್ನುವುದು ಈ ಸರ್ಕಾರದ ಆಸೆ. ಇನ್ನು ನಮ್ಮ ಘೋರ್ಪಡೆಯವರು ಏನು ತರುತ್ತಿದ್ದಾರೆ, ನಾವೇನು ತರುತ್ತಿದ್ದೇವೆಯೋ, ಪ್ರತಿ ಹಂತದಲ್ಲೂ ಕೂಡ ನಾವು ಅವರಿಗೆ, ಈ ಒಂದು ವ್ಯವಸ್ಥೆಯಲ್ಲಿ ಬಂದಿರುವಂತಹ ಮುಖಂಡರುಗಳಿಗೆ ಹೆಚ್ಚಿಗೆ ಶಕ್ತಿ ಕೊಡಬೇಕು, ಜ್ಞಾನೋದಯ ಮಾಡಬೇಕು ಎಂದಾಗ ನಾವು ಮೊಟಕು ಮಾಡುವಂತಹ ಪ್ರಶ್ನೆ ಇಲ್ಲ. ಕೆಲವು ಕೋರ್ಟ್‌ಗಳು ನಮಗೆ ಆದೇಶ ಕೊಟ್ಟಿರುವುದರಿಂದ, ಈ ಮಾರ್ಗದಲ್ಲಿ ನೀವು ಹೋಗಬೇಕು, ಅಪೀಲ್ ಅನ್ನು ಮತ್ತೊಂದು standing committeeದನ್ನು ನೀವು K.A.Tಗೆ, ಕೊಡಬೇಕು. ಕೋರ್ಟಿಗೆ ಕೊಡಬೇಕು ಎಂದು ತೀರ್ಮಾನ ಬಂದಿರುವಂತಹ ಸಂದರ್ಭದಲ್ಲಿ ಕೆಲವು ಕಡೆ ಡಿಸ್ಟ್ರಿಕ್ಟ್ ಕೋರ್ಟಿಗೆ ಇಲ್ಲಿ KATಗೆ ಇದನ್ನು ನಾವು ಈ ಸಂದರ್ಭದಲ್ಲಿ ಅವಕಾಶವನ್ನು ಮಾಡಿಕೊಂಡಿದ್ದೇವೆ. ಆದ್ದರಿಂದ ಬಹುಶಃ ನಾನು ಜಗದೀಶ್ ಶೆಟ್ಟರ್‌ರವರು ಕೊಟ್ಟಂತಹ ಅನೇಕ ಸಲಹೆಗಳನ್ನು, ಅವರ ಮನಸ್ಸಿನಲ್ಲಿ ಇದ್ದಂತಹ ಅನುಮಾನಗಳನ್ನು ಬಹುಶಃ ನಾನು ತಿಳಿಸಿದ್ದೇನೆ ಎಂದು ಅಂದುಕೊಂಡಿದ್ದೇನೆ. ಇನ್ನು ಇದರಲ್ಲಿನ different powers ಬಗ್ಗೆ ಹೇಳುವುದಾದರೆ, officersಗೆ, ಮತ್ತೊಂದಕ್ಕೆ ಅವರಿಗೇನೂ ಪವರ್ಸ್ ಏನೂ ಇಲ್ಲ. ಬರೀ ಬಿಲ್ಡಿಂಗ್ ವಿಚಾರದಲ್ಲೂ, ಅವರು ಮಾಡುವಂತಹ ಸಂದರ್ಭದಲ್ಲಿ ಈ ರೇಂಜ್ ಅನ್ನು ಫಿಕ್ಸ್ ಮಾಡುವುದಕ್ಕೆ ಕಾರ್ಪೊರೇಷನ್‌ಗೂ ಕೂಡ ಯಾವ ತರಹದ ಪವರ್ಸ್ ಇಲ್ಲಿ ಇಲ್ಲ. ನಿಮಗೇ ಪವರ್ಸ್ ಇದೆ. ನೀವು ಫೈಲ್ ಮಾಡುವಂತಹ ಫಾರ್ಮ್‌ನಲ್ಲಿ ನೀವೇ ಪ್ರತಿಯೊಂದಕ್ಕೂ ನಿಮ್ಮ ನಿಮ್ಮ ಆಸ್ತಿಗೆ ಎಷ್ಟು ಬೆಲೆ ಇದೆ ಎಂದು ಫಿಕ್ಸ್ ಮಾಡಬಹುದಾಗಿದೆ. ಇನ್ನು 104 ಮತ್ತು 105ನೇ ಪ್ರಾವಿಷನ್ ಬಗ್ಗೆ ಮಾತನಾಡುವಂತಹ ಸಂದರ್ಭದಲ್ಲಿ ಈ ಅಬಾಲಿಷ್ ಬಗ್ಗೆ ತಾವೇನು ಹೇಳುತ್ತೀರಿ, ಇಲ್ಲಿ ಪವರ್ಸ್, under the old provision, permission from the Government was necessary. ಈಗ, But, by abolition of the section, powers is being given to the Corporation. ಅಂದರೆ ಕಾರ್ಪೊರೇಷನ್‌ಗೆ ಹೆಚ್ಚು ಶಕ್ತಿ. ಸರ್ಕಾರಕ್ಕೆ ಬೇಡ, ಕಾರ್ಪೊರೇಷನ್‌ಗೆ ಹೆಚ್ಚಿಗೆ ಶಕ್ತಿಯನ್ನು ನಾವು ಕೊಟ್ಟಿದ್ದೇವೆ, ಅಂದರೆ ಈ ಒಂದು ವ್ಯವಸ್ಥೆಯಲ್ಲಿ, 73 ಮತ್ತು 74ನೇ ತಿದ್ದುಪಡಿ ಏನು ಇವತ್ತು ಇದೆಯೋ, ಅದರ ಅಡಿಯಲ್ಲಿ ಇವರಿಗೇ ಹೆಚ್ಚಿನ ಪವರ್ಸ್ ಅನ್ನು ಕೊಡುತ್ತಿದ್ದೇವೆ. ಸರ್ಕಾರದಲ್ಲಿ ಇದ್ದಂತಹ ಪವರ್ಸ್ ಕೂಡ ನಾವು ಅವರಿಗೇ ಕೊಡುವಂತಹ ಕೆಲಸವನ್ನು ಮಾಡುತ್ತಿದ್ದೇವೆ. ಸೆಕ್ಷನ್ 108ರ ಒಮಿಷನ್ ಬಗ್ಗೆ ಅವರು ಮಾತನಾಡಿದರು. 108ರ ಸೆಕ್ಷನ್ ಟ್ಯಾಕ್ಸ್ ರೆಡ್ಯೂಸ್ ಮಾಡುವ ಬಗ್ಗೆ ಇದೆ. Three times the land occupied by the building. ಹೈಯರ್ ರೇಟ್ ಬಗ್ಗೆ ಈಗ ನಾವು ಏನು ಮಾಡುತ್ತಿದ್ದೇವೆ ಎಂದರೆ, we are proposing to treat the entire land not built upon the vacant land. But the tax will be reduced. ಅಲ್ಲಿಯೂ ಕೂಡ ನಾವು ಕಡಿಮೆ ಮಾಡುತ್ತೇವೆ. ಇದನ್ನು ಅರ್ಥಮಾಡಿಕೊಳ್ಳುವುದು ಸ್ವಲ್ಪ ಕಷ್ಟವಾಗಿರಬಹುದು. ಗ್ರೀನರಿ ಜಾಸ್ತಿಯಾಗಬೇಕು, ಹೆಚ್ಚಿಗೆ ಇದ್ದ ಜಾಗದಲ್ಲಿ ಬಳಸಿಕೊಂಡು

ಅದು ಹಸಿರು ಆದರೆ ನಮಗೆ ಉತ್ತಮ ಎನ್ನುವ ದೃಷ್ಟಿಯಿಂದ ಅದನ್ನು ಎನ್‌ಕರೇಜ್ ಮಾಡಲಿಕ್ಕೆ ಮತ್ತು ಸೆಕ್ಷನ್ 148ರ ಬಗ್ಗೆ ಮಾತನಾಡಿದಿರಿ, ಕಾರ್ಪೊರೇಷನ್ ಟ್ಯಾಕ್ಸ್ ಫಿಕ್ಸ್ ಮಾಡುತ್ತೇವೆಂದು ಅಲ್ಲಿ ಏನೂ ಇಲ್ಲ. ನೀವು ಏನು ಕಾನೂನು ಮಾಡುತ್ತೀರಿ ಅದೇ ಕಾನೂನು ನೀವು ಏನು ಆಕ್ಟ್ ಮಾಡುತ್ತೀರಿ ಅದೇ ಆಕ್ಟ್. ಸೆಲ್ಫ್ ಅಸೆಸ್‌ಮೆಂಟ್ ಮುಖಾಂತರ ಬೇರೆ ಇನ್ನು ಯಾರಿಗೂ ಕೂಡ ಕಾರ್ಪೊರೇಷನ್‌ಗೆ ಇನ್ನೊಬ್ಬರಿಗೆ ಯಾರಿಗೂ ಅವಕಾಶ ಇಲ್ಲ. ಸೆಕ್ಷನ್ 176ರ ಬಗ್ಗೆ 2000ದ ಮೂವಬಲ್ ಪ್ರಾಪರ್ಟಿ ಬಗ್ಗೆ ಮಾತನಾಡಿದಿರಿ, ಇಲ್ಲಿ ಇಮ್ಮೂವಬಲ್ ಪ್ರಾಪರ್ಟಿ ಬಗ್ಗೆ, ಮೂವಬಲ್ ಪ್ರಾಪರ್ಟಿ ಬಗ್ಗೆ ಈ ಸಂದರ್ಭದಲ್ಲಿ ಡಿಸ್ಪೋಸ್ ಮಾಡುವಾಗ ಟ್ರಾನ್ಸ್‌ಫರೆನ್ಸಿ ಆಕ್ಟ್ ಬಂದಿದೆ. ಎಲ್ಲಾ ಟ್ರಾನ್ಸ್‌ಫರನ್ಸಿ ಆಕ್ಟ್, ಮುಖಾಂತರ ಆಗಬೇಕೆಂದು ಹೇಳುವಾಗ ವಿಚಾರ ಎಲ್ಲಿದೆ? ಕಂಪ್ಲೀಟ್ ಇದನ್ನು ಒಮಿಟ್ ಮಾಡುವ ಪ್ರಶ್ನೆ ಇಲ್ಲ. ಇದನ್ನು ಕಂಪ್ಲೀಟ್ ಟ್ರಾನ್ಸ್‌ಫರೆನ್ಸಿ ಆಕ್ಟ್‌ಗೆ ತಂದು ಬಿಟ್ಟಿದ್ದೇವೆ. ಕಾರ್ಪೊರೇಷನ್ ಹಾಗೂ ಸಿಎಮ್‌ಸಿ ಆಸ್ತಿಗಳ ಬಗ್ಗೆ ತಾವು ಬಹುಶಃ ಒಪ್ಪಿಕೊಳ್ಳುತ್ತೀರಿ ಎಂದು ಕಾಣುತ್ತದೆ. ಬೇಕಾದಷ್ಟು ಸಂದರ್ಭದಲ್ಲಿ ಮಿಸ್ ಯೂಸ್ ಆಗುತ್ತಿತ್ತು. ರೆಂಟ್ ಕೊಡುವ ಸಂದರ್ಭದಲ್ಲಿ, ಅಲಾಟ್ ಮಾಡುವ ಸಂದರ್ಭದಲ್ಲಿ, ಶಿವಕುಮಾರ್ ಮಾಡಿಕೊಂಡು ಬಿಟ್ಟರು, ಕೃಷ್ಣಪ್ಪನವರು ಮಾಡಿಕೊಂಡು ಬಿಟ್ಟರು. ಇವರು ಮಾಡಿಕೊಂಡರು ಎಂದು ಇನ್ನೊಬ್ಬರು ಮಾಡಿಕೊಂಡರು ಎಂದು ಬೇಕಾದಷ್ಟು ಆರೋಪಗಳನ್ನು ಕೆಲವು ಸಂದರ್ಭದಲ್ಲಿ ನಾವು ಈ ಮನೆಗಳಲ್ಲಿ ನೋಡಿದ್ದೇವೆ. ಇದನ್ನೆಲ್ಲಾ ತಪ್ಪಿಸಬೇಕೆಂದು ರಾಜ್ಯದಲ್ಲಿ ಮೊದಲನೇ ಬಾರಿಗೆ ನಾವು ಇದನ್ನು ಆಕ್ಷನ್ ಹಾಕಬೇಕು. ಇದನ್ನು ಗೈಡ್‌ಲೈನ್ಸ್ ಫಿಕ್ಸ್ ಮಾಡಿ ಇನ್‌ಸ್ಟಿಟ್ಯೂಷನ್‌ಗೆ ಯಾವ ರೀತಿ ಬೆನಿಫಿಟ್ ಕೊಡಬೇಕು. ಸಾಮಾನ್ಯ ಜನತೆಗೆ ಯಾವ ರೀತಿ ಮಾಡಬೇಕು. ದೊಡ್ಡವರು, ಚಿಕ್ಕವರು ಎನ್ನುವ ಪ್ರಶ್ನೆ ಇಲ್ಲ. ಎಲ್ಲರೂ ಕೂಡ ಪಬ್ಲಿಕ್ ಆಕ್ಷನ್‌ನಲ್ಲಿ ಪಾರ್ಟಿಸಿಪೇಟ್ ಮಾಡಬೇಕು. ವಿಶೇಷವಾಗಿ ಎಷ್ಟೋ ಮಾಧ್ಯಮಗಳು ಇದರ ಬಗ್ಗೆ ಪ್ರಶಂಸೆ ವ್ಯಕ್ತ ಮಾಡಿವೆ. ನಮ್ಮ ಪಕ್ಷದ ಕಾರ್ಪೊರೇಟರ್‌ಗಳೇ ಎಷ್ಟೋ ಜನ ನಮಗೆ ಬಾಯಿಗೆ ಬಂದ ಹಾಗೆ ಬೈದಿದ್ದಾರೆ. ನಾವು ಯಾರಿಗೋ ನಮಗೆ ಬೇಕಾದವರಿಗೆ ಕೊಡುತ್ತಿದ್ದೆವು. ಕಡಿವಾಣ ಮಾಡಿದಿರಿ, ಹರಾಜು ಆಕ್ಟ್ ತಂದಿರಿ, ಅದು ಅವರಿಗೆ ಸಿಗುತ್ತದೆ. ಇವರಿಗೆ ಸಿಗುತ್ತದೆ. ನಮ್ಮವರಿಗೆ ಸಹಾಯ ಮಾಡುವುದಕ್ಕಾಗುವುದಿಲ್ಲ ಎಂದು ಹೇಳಿದರು. ಆದರೆ ಕಾರ್ಪೊರೇಷನ್ ಪ್ರಾಪರ್ಟಿಗಳನ್ನು ನಾವು ಏನಾದರೂ ಮಾಡಿ ಉಳಿಸಲಿಲ್ಲ ಎಂದರೆ, ಆ ನಗರಗಳ ಭವಿಷ್ಯಕ್ಕೋಸ್ಕರ ಉಳಿಸಲಿಲ್ಲ ಎಂದರೆ, ನಾವು ಈ ಜವಾಬ್ದಾರಿ ಸ್ಥಾನದಲ್ಲಿ ನಿಂತುಕೊಂಡು ಬಹಳ ತಪ್ಪು ಮಾಡಿದ ಹಾಗಾಗುತ್ತದೆ. ಯಾವುದಾದರೂ ಒಳ್ಳೆಯ ಕೆಲಸ ಮಾಡಬೇಕಾದರೆ ನಿಷ್ಠೂರವಾಗಬೇಕಾಗುತ್ತದೆ. ನಿಷ್ಠೂರ ಆಗಿ ಈ ದಿಕ್ಕಿನ್ನಲ್ಲಿ ನಾವು ಆ ತೀರ್ಮಾನವನ್ನೂ ಕೂಡ ತೆಗೆದುಕೊಂಡಿರುವುದು ತಮಗೆ ಗೊತ್ತಿರುವ ವಿಚಾರ. ಒಂದು ಕಮಿಷನರ್‌ಗೆ 11 ತಿಂಗಳು ಇತ್ತು, ಅದನ್ನು ಎರಡು ವರ್ಷ ಮಾಡಿದ್ದೇವೆ. ಏಕೆ ಮಾಡುದ್ದೇವೆಂದರೆ, ಅಗ್ರಿಮೆಂಟ್ ಮತ್ತೊಂದು ಇಲ್ಲ. ಎರಡು ವರ್ಷ ಆದರೆ ಅಟ್‌ಲೀಸ್ಟ್ ಒಂದು ರಿಜಿಸ್ಟ್ರೇಷನ್ ಇರುತ್ತದೆ. ಒಂದು ಬೈಂಡಿಂಗ್ ಇರುತ್ತದೆ. ಉಳಿದದ್ದು ಐದು ವರ್ಷಗಳಿಗೆ ಇಟ್ಟಿದ್ದೇವೆ. ತಮ್ಮ ಕಾರ್ಪೊರೇಷನ್‌ಗೆ ಐದು ವರ್ಷ ಇಟ್ಟಿದ್ದೇವೆ. ನಿಮಗೆ ಕಂಪಲ್ಸರಿ ಎರಡು ವರ್ಷ ಎಂದರೆ, ಕಾರ್ಪೊರೇಷನ್ ಕಮೀಷನರ್ ಹನ್ನೊಂದು ತಿಂಗಳಿಗೇ ರಿಮ್ಯೂವಲ್ ಮಾಡಿಕೊಂಡು ಬಂದರು ಎಂದು ಅವರ ಮೇಲೆ ಬೇಕಾದಷ್ಟು ಆರೋಪಗಳನ್ನು ನಾವು ನೋಡಿದ್ದೇವೆ. ಇದನ್ನೆಲ್ಲಾ ತಪ್ಪಿಸಬೇಕೆಂದು ಎರಡು ವರ್ಷ ಆದಾಗ ಒಂದು ಬೈಂಡಿಂಗ್ ರಿಜಿಸ್ಟ್ರೇಷನ್ ಅಗ್ರಿಮೆಂಟ್ ಇವೆಲ್ಲಾ ಶಾಶ್ವತವಾಗಿ

ಆಗಲಿ ಎನ್ನುವ ದೃಷ್ಟಿಯಿಂದ ಈ ಬಗ್ಗೆ ಸೆಕ್ಷನ್ 176ರ ಬಗ್ಗೆ ನಾವು ಚಿಂತನೆ ಮಾಡಿದ್ದೇವೆ. ಮತ್ತು ಪಬ್ಲಿಕ್ ಕಾರ್ಪೊರೇಷನ್ ಸ್ಟ್ಯಾಫ್ ಈ ಲೈಸನ್ಸ್ ಬಗ್ಗೆ ಸಾಕಷ್ಟು ವಿರೋಧ ಮಾಡಿದರು. ಒಂದು ವರ್ಷಕ್ಕೆ ಇರಬೇಕು. ಮತ್ತೊಂದು ಬೇಕು ಎಂದು ಇವೆಲ್ಲಾ ಇದೆ. ಆದರೂ ಕೂಡ ನಾವು ಯಾವ ಸಂದರ್ಭದಲ್ಲಿಯೂ ಯಾವುದಕ್ಕೂ ಮಣೆ ಹಾಕದೆ, ಅನೇಕ ಕಾರ್ಯಕ್ರಮಗಳನ್ನು ಜನರ ಹತ್ತಿರ ಹೋಗಲಿಕ್ಕೆ ಮಾಡಿದ್ದೇವೆ. ನಮ್ಮ ಜಯಪ್ರಕಾಶ್ ಹೆಗಡೆಯವರು 50 ಪರ್ಸೆಂಟ್ ರಿಬೇಟ್ ಬಗ್ಗೆ ಹೇಳಿದರು. ಆಗಲೇ 50 ಪರ್ಸೆಂಟ್ ರಿಬೇಟ್ ರೆಸಿಡೆನ್‌ಷಿಯಲ್ ಬಿಲ್ಡಿಂಗ್ ಯಾರು ಸ್ವಂತ ಆಕ್ಯುಪೈ ಮಾಡಿಕೊಂಡಿದ್ದಾರೆ. ಅವರಿಗೆ ಕೊಟ್ಟಿದ್ದೇವೆ. ಬಾಡಿಗೆ ಕೊಡುವುದಕ್ಕೆ ಕಷ್ಟವಾಗುತ್ತದೆ. ಸೆಲ್ಫ್ ಆಕ್ಯುಪೈಡ್‌ಗೆ 50 ಪರ್ಸೆಂಟ್ ರಿಬೇಟ್ ಕೊಟ್ಟಿದ್ದೇವೆ. ತಿದ್ದುಪಡಿ ಮಸೂದೆ ಏನನ್ನು ತಂದಿದ್ದೇನೆ. ಇದನ್ನು ಜೆಎಸ್‌ಸಿಗೆ ಹಾಕಿ ಎಂದು ಹೇಳುವುದು, ಇನ್ನೊಂದು ಹಾಕಿ ಎಂದು ಹೇಳುವುದು ಅನೇಕ ಸಲಹೆಗಳನ್ನು ಕೊಡುತ್ತೀರಿ, ಆದರೆ ನಾವು ತಂದಿರುವಂತಹ ಸಿಸ್ಟಮ್ ಏನಿದೆ ಇದನ್ನು ಇಡೀ ರಾಷ್ಟ್ರ ಮೆಚ್ಚಿದೆ, ನೀವು ಮೆಚ್ಚಿದಿರಿ, ವಿರೋಧ ಪಕ್ಷದವರು ಮೆಚ್ಚಿದ್ದಾರೆ, ಮಾಧ್ಯಮದವರೂ ಕೂಡ ಮೆಚ್ಚಿದ್ದಾರೆ. ಇದನ್ನು ಏನಾದರು ಬದಲಾವಣೆ ಮಾಡಬೇಕೆಂದರೆ ಖಂಡಿತ ನಾವು ಯಾರಿಗೂ ಏನೂ ದೊಡ್ಡವರಲ್ಲ. ಜನರ ಹತ್ತಿರ ಹೋಗಬೇಕು. ಜನರ ಸೇವೆ ಜನಾರ್ಧನ ಸೇವೆ. ಈ ದಿಕ್ಕಿನಲ್ಲಿ ಈ ಸರ್ಕಾರ ನಿಮಗೆಲ್ಲಾ ಸಂತೋಷವಾಗಿ ಇಡಲು ಕಾರ್ಯಕ್ರಮ ಹಾಕುತ್ತಿದೆ. ಆದ್ದರಿಂದ ನಮ್ಮ ಅಂಕೋಲ ಶಾಸಕರು ಒಂದು ಸಲಹೆ ಕೊಟ್ಟಿದ್ದರು. ಅವರು ಅನೇಕ ಸಂಸ್ಥೆಗಳ ಬಗ್ಗೆ, ಟ್ಯಾಕ್ಸ್ ಬಗ್ಗೆ ಅದನ್ನು ಕೂಡ ಮುನಿಸಿಪಲ್ ಆಕ್ಟ್‌ನಲ್ಲಿ ಇಲ್ಲದಿದ್ದರೂ ಕೂಡ ಅವೆಲ್ಲಾ ತಂದು ಆ ಸಂಸ್ಥೆ ಭಾರಿಟಬಲ್ ಇನ್‌ಸ್ಟಿಟ್ಯೂಷನ್ಸ್ ಮಾಡುವುದಕ್ಕಾಗುವುದಿಲ್ಲ. ಮಾಡುವುದು ನಮಗೆ ಇಲ್ಲವೆಂದು ವಾದ ಮಾಡಿದರು. ನನ್ನ ಕಿವಿಯಲ್ಲಿ ಬಂದು ಹೇಳಿ ಹೋಗಿದ್ದರು. ಕಿವಿಯಲ್ಲಿ ಕೇಳಿ ಅದನ್ನು ಕಾನೂನಿನಲ್ಲಿ ಇಂಪ್ಲಿಮೆಂಟ್ ಮಾಡಿ ಅವರಿಗೆ ಸಂತೋಷ ಪಡಿಸುವ ಕೆಲಸ ಮಾಡಿದ್ದೇವೆ. ಕಾರ್ಪೊರೇಟರ್ಸ್ ನನ್ನ ಸ್ನೇಹಿತರು ಅವರಿಗೆ ಹೇಳುವುದೇನೆಂದರೆ ಇಡೀ ರಾಜ್ಯದಕ್ಕೆ ಮಾದರಿಯಾಗಿ ಕಾನೂನು ತಂದಿದ್ದೇವೆ. ಆದ್ದರಿಂದ ಇದನ್ನು ವಿರೋಧ ಮಾಡುವುದರಲ್ಲಿ ಅರ್ಥ ಇಲ್ಲ. ಅದನ್ನು ಪಾಸ್ ಮಾಡಬೇಕೆಂದು ತಮ್ಮ ಮುಖಾಂತರ ನಾನು ನಮ್ರತೆಯಿಂದ ಕೇಳಿಕೊಳ್ಳುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಶಿವಕುಮಾರ್‌ರವರು ನಾವು ರಾಮದಾಸ್‌ರವರು ಮತ್ತು ಇನ್ನಿತರ ಶಾಸಕರು ಪ್ರಮುಖವಾದ ವಿಷಯಗಳನ್ನು ಮಾತನಾಡಿದ್ದೆವು. ಅವುಗಳನ್ನು ಬಿಟ್ಟು, ಅವುಗಳಿಗೆ ಉತ್ತರ ಕೊಡುವುದು ಬಿಟ್ಟು ಒಳ್ಳೆಯ ಭಾಷಣವನ್ನು ಬಹಳ ವಿಚಾರ ಪ್ರಚೋದಕ ಭಾಷಣ ಮಾಡಿದರು. ನಾನು ಅದಕ್ಕೆ ಅಭಿನಂದನೆ ಹೇಳುತ್ತೇನೆ. ಆಮೇಲೆ ಹೇಳಿದರು, ಕೇಂದ್ರ ಸರ್ಕಾರದ ಕೆಲವು ಗೈಡ್‌ಲೈನ್ಸ್ ಪ್ರಕಾರ ಅದನ್ನು ತೆಗೆದುಕೊಂಡು ಬಂದಿದ್ದೇವೆಂದು ಹೇಳಿದರು. ದಯವಿಟ್ಟು ಆ ಗೈಡ್‌ಲೈನ್ಸ್‌ನಲ್ಲಿ ಏನಿದೆ ಎಂದು ನೋಡೋಣ ಸದನದ ಮುಂದೆ ಇಡಿ. ಆ ಗೈಡ್‌ಲೈನ್ಸ್‌ನಲ್ಲಿ ಏನು ಕೊಟ್ಟಿದ್ದಾರೆ

ಶ್ರೀ ಡಿ.ಕೆ ಶಿವಕುಮಾರ್ : ಮೇಲ್ಮನೆಯಲ್ಲಿ ನಮ್ಮ ಆಚಾರ್‌ನವರು ನೋಡಿದ್ದಾರೆ. ನಿಮಗೂ ಕೊಡುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ : ಕೌನ್ಸಿಲ್‌ನಲ್ಲಿ ಅಲ್ಲ, ಈ ಸದನದಲ್ಲಿ ಮಂಡನೆ ಮಾಡಿ. ಆ ಗೈಡ್‌ಲೈನ್ಸ್‌ನಲ್ಲಿ ಏನಿದೆ, ನಾವು ಹೇಳುವುದು ಬೇಸಿಕ್ಕಾಗಿ ಸ್ವಯಂಘೋಷಿತ ತೆರಿಗೆ ವ್ಯವಸ್ಥೆಯನ್ನು

ನಾವು ಅಪೋಸ್ ಮಾಡುತ್ತಿಲ್ಲ. ಅದನ್ನು ತಾವು ಅರ್ಥಮಾಡಿಕೊಳ್ಳಿ. ಬೇಸಿಕ್ಕಾಗಿ ಮೂಲಭೂತವಾಗಿ ನಾವು ವಿರೋಧ ಮಾಡುತ್ತಿಲ್ಲ. ಆದರೆ ಇಲ್ಲಿ ನೀವು ಕ್ಲಾಸನ್ ಸೇರಿಸಿದ್ದೀರಿ. ಕೆಲವೊಂದು ನಿಯಮಾವಳಿಗಳನ್ನು ಸೇರಿಸಿದ್ದೀರಿ. ಅದನ್ನು ನಾವು ವಿರೋಧ ಮಾಡುತ್ತಿದ್ದೇವೆ. 2–3 ವಿಷಯಗಳಿಗೆ ಸ್ಪಷ್ಟವಾದ ಉತ್ತರ ಬರಲಿಲ್ಲ. ರೆಂಟ್ ಬೇಸಿಸ್ ಮೇಲೆ ಟೇಟಬಲ್ ವ್ಯಾಲ್ಯುಯೇಷನ್ ಬೇಡ. ಬೆಂಗಳೂರಿನವರಿಗೆ ಹೇಗೆ ಮಾಡಿದ್ದೀರಿ ಅದೇರೀತಿ ಮಾಡಿಯೆಂದು ನಾವು ಹೇಳಿದ್ದೆವು.

ಶ್ರೀ ಡಿ.ಕೆ. ಶಿವಕುಮಾರ್ : ಮಾನ್ಯ ಜಗದೀಶ್ ಶೆಟ್ಟರ್‌ರವರೆ, still you try to convince us. ಜನರಿಗೆ ಇನ್ನು ಏನಾದರೂ ಮಾಡುವುದಕ್ಕೆ ಸಾಧ್ಯವಾ? We are ready to do it. ಸುಮ್ಮನೆ ನೀವು ಹಾಗೆ ಮಾಡಬೇಕು, ಹೀಗೆ ಮಾಡಬೇಕೆಂದು ಹೇಳುವುದು ಅಲ್ಲ.

ಶ್ರೀ ಜಗದೀಶ್ ಶೆಟ್ಟರ್ : ಎರಡು–ಮೂರು ಸಜೆಷನ್ಸ್ ಇವೆ. ಕ್ಯಾಪಿಟಲ್ ವ್ಯಾಲ್ಯುಯೇಷನ್ ಬರ್ಡನ್ ಹೆಚ್ಚಾಗುತ್ತದೆ. ಕ್ಯಾಪಿಟಲ್ ವ್ಯಾಲ್ಯುಯೇಷನ್ ಬಿಡುತ್ತೇವೆ, ಬೆಂಗಳೂರಿನಲ್ಲಿ ಏನಿದೆ, ರೆಂಟಲ್ ಬೇಸಿಸ್ ಮೇಲೆ ಆಕ್ಟ್ ಇದೆ. ಅಮೆಂಡ್‌ಮೆಂಡ್ ತಂದು ಬಿಡಿ. ಬೆಂಗಳೂರಿನಲ್ಲಿ ಆಪ್‌ಷನ್ ಇದೆ. ಬೇರೆ ಕಡೆ ಆಪ್‌ಷನ್ ಇಲ್ಲ. ಇದರ ಬಗ್ಗೆ ಉತ್ತರ ಕೊಡಲಿಲ್ಲ.

ಶ್ರೀ ಡಿ.ಕೆ. ಶಿವಕುಮಾರ್ : ಇಲ್ಲಿ ಕೂಡ It is here for a limited period. ಕೋರ್ಟಿಗೆ ಹೋಗಿ ಕೋರ್ಟಿನಲ್ಲಿ ವಿಚಾರವಾಗಿದೆ....

ಶ್ರೀ ಜಗದೀಶ್ ಶೆಟ್ಟರ್ : ನೀವು ಸಮಗ್ರವಾಗಿ ಮಸೂದೆ ತನ್ನಿ. ಬೆಂಗಳೂರಿನ ನಾಗರೀಕರಿಗೆ ಆಪ್‌ಷನ್ ಇದೆ. ಇಡೀ ರಾಜ್ಯದ ಬೇರೆ ನಾಗರೀಕರಿಗೆ ಆಪ್‌ಷನ್ ಇಲ್ಲ. ಕಂಪಲ್ಸರಿ ಕ್ಯಾಪಿಟಲ್ ವ್ಯಾಲ್ಯುಯೇಷನ್ ಎಲ್ಲರಿಗೆ ಇದೆ. ಬೆಂಗಳೂರಿನ ನಾಗರೀಕರಿಗೆ ರೆಂಟಲ್ ಬೇಸಿಸ್ ಇದು ಯಾವ ನ್ಯಾಯ? ಅದಕ್ಕೆ ನಿಮ್ಮ ಉತ್ತರ ಇಲ್ಲ.

ಶ್ರೀ ಸಿ.ಎಸ್. ನಾಡಗೌಡ : ಸ್ಲಾಬ್ ಟ್ಯಾಕ್ಸ್ ಆದರೆ ಬಹಳ ಕಡಿಮೆಯಾಗುತ್ತದೆ. ಎರಡು ತಿಂಗಳು ರೆಂಟಲ್ ಆದಾಗ 50 ರಿಂದ 60 ಸಾವಿರ ಟ್ಯಾಕ್ಸ್ ಆಗುತ್ತದೆ. ಟ್ಯಾಕ್ಸ್ ಕಡಿಮೆ ಇದೆ, ಬೇರೆ ಕಡೆ ಅಷ್ಟೇ ಆಗುವುದಿಲ್ಲ.

ಶ್ರೀ ಜಗದೀಶ್ ಶೆಟ್ಟರ್ : ರಿಜಿಸ್ಟ್ರೇಷನ್ ಆಕ್ಟ್ ಪ್ರಕಾರ ಸಬ್‌ರಿಜಿಸ್ಟಾರ್ ಆಫೀಸ್‌ನಲ್ಲಿ ಏನು ಇರುತ್ತದೆ. ಅದರ ಮೇಲೆ ಬರ್ಡನ್ ಆಗುತ್ತದೆ.

Sri C.S. NadaGowda : I am paying the tax. ಬೆಂಗಳೂರಿನಲ್ಲೂ ನಾನು ಟ್ಯಾಕ್ಸ್ ಕೊಡುತ್ತಿದ್ದೇನೆ.

ಶ್ರೀ ಜಗದೀಶ್ ಶೆಟ್ಟರ್ : ಬೇರೆ ನಗರಗಳಲ್ಲಿ ಏನಾಗುತ್ತದೆಂದು ಹೇಳುತ್ತಿದ್ದೇನೆ. ಬೆಂಗಳೂರಿನ ಬಗ್ಗೆ ನಾನು ಹೇಳುತ್ತಿಲ್ಲ. ಇಲ್ಲಿ ಕ್ಯಾಪಿಟಲ್ ಮೇಲೆ ಇಲ್ಲ, ರೆಂಟಲ್ ಮೇಲೆ ಇದೆ. ಅದು ಅಡಾಪ್ಟ್ ಮಾಡಿಕೊಂಡಿದ್ದೇವೆ. ಅದನ್ನು ಏಕೆ ಬೇರೆ ಕಡೆ ಅಡಾಪ್ಟ್ ಮಾಡುವುದಿಲ್ಲ. ಅದಕ್ಕೆ ಇದಕ್ಕೆ ಬಹಳ ವ್ಯತ್ಯಾಸ ಇದೆ. ರೆಂಟಲ್ ಕ್ಯಾಪಿಟಲ್ ನೋಡಿದರೆ ರೆಂಟಲ್ ಬೇಕಾಗುತ್ತದೆ. ಅಷ್ಟು ಬರ್ಡನ್ ಆಗುವುದಿಲ್ಲ. ಅದು ಪ್ರಾಕ್ಟಿಕಲ್ ನಾವು ನೋಡಬೇಕಾಗುತ್ತದೆ. ಅದನ್ನು ಸಜೆಷನ್ ಮಾಡಿದ್ದೆ. ಅದಕ್ಕೆ ಶಿವಕುಮಾರ್‌ರವರು ರೆಸ್ಪಾನ್ಸ್ ಮಾಡಲಿಲ್ಲ. ಎರಡು–ಮೂರು ಸಜೆಷನ್ಸ್ ಇವೆ.

ಶ್ರೀ ಡಿ.ಕೆ. ಶಿವಕುಮಾರ್ : ಒಂದು ನಿಮಿಷ ಈಲ್ಡ್ ಆಗಿ. ಈಗಿರುವ ಎಸ್‌ಎಎಸ್ ಪದ್ಧತಿಗೆ ಆಧಾರವಾಗಿ ಕಾನೂನು ಅಂಶಗಳನ್ನು ಅಳವಡಿಸಿಕೊಂಡು ಉಚ್ಚ ನ್ಯಾಯಾಲಯವು

ನಿರ್ದೇಶನ ನೀಡಿದ್ದು, ಅಲ್ಲದೆ ಬಾಡಿಗೆ ಆಧಾರದ ಮೇಲೆ ತೆರಿಗೆ ವಿಧಿಸುವ ಕಂದಾಚಾರ ಮತ್ತು ಶಿಷ್ಟಾಚಾರ ತೆರಿಗೆ ಪದ್ಧತಿಯನ್ನು ಜಾರಿಯಲ್ಲಿ ವೈಜ್ಞಾನಿಕ ಹೊಸ ಪದ್ಧತಿಯನ್ನು ರಾಜ್ಯದ ಎಲ್ಲಾ ನಗರಗಳಲ್ಲಿಯೂ ಅಳವಡಿಸಲು ಈ ತಿದ್ದುಪಡಿಯನ್ನು ನಾವು ತಂದಿದ್ದೇವೆ; ಈಗ ಪ್ರಸೆಂಟ್ ಬೆಂಗಳೂರಿನಲ್ಲಿ ಇರುವುದು ಒಂದೇ ಮಾದರಿ ಕ್ಯಾಪಿಟಲ್ ವ್ಯಾಲ್ಯು ಪದ್ಧತಿ ಇದೆ.

ಶ್ರೀ ಜಗದೀಶ್ ಶೆಟ್ಟರ್ : ಬೆಂಗಳೂರಿನಲ್ಲಿ ಸೆಲ್ಫ್ ಅಸೆಸ್‌ಮೆಂಟ್ ಸ್ಕೀಮ್ ಇದೆ. ಅದನ್ನು ತಂದು ನೋಡಿ. ಸದನಕ್ಕೆ ತಪ್ಪು ಮಾಹಿತಿ ಕೊಟ್ಟಿದ್ದೀರಿ ದಯವಿಟ್ಟು ಆ ಸ್ಕೀಮ್ ಏನಿದೆ ಅದನ್ನು ತರಿಸಿ.

ಶ್ರೀ ಡಿ.ಕೆ. ಶಿವಕುಮಾರ್ : ತರಿಸುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ : ಅಲ್ಲಿ ರೆಂಟಲ್ ಮೇಲೆ ಮಾಡುತ್ತಿದ್ದಾರೆ. ಮತ್ತೊಂದು ಆಪ್‌ಷನಲ್ ಇದೆ. ನಾಗರೀಕರು ಅಡಾಪ್ಟ್ ಮಾಡಬಹುದು ಯಾರು ಅಡಾಪ್ಟ್ ಮಾಡುವುದಿಲ್ಲ. ಕರೆಂಟ್ ಟ್ಯಾಕ್ಸ್ ಮೇಲೆ ಅದರ ಮೇಲೆ ಎರಡೂವರೆ ಪಟ್ಟು ಕೊಟ್ಟು ಬಿಟ್ಟರೆ ಮುಗಿಯಿತು, ಅದೇ ಪ್ರಾವಿಷನ್ ಬೇರೆಯವರಿಗೆ ಮಾಡಿ ಯಾರು ಬೇಡವೆಂದು ಹೇಳುತ್ತಾರೆ? ಐದು ವರ್ಷಗಳಿಗೊಮ್ಮೆ ರಿವಿಷನ್ ಇದೆ. ನೀವು ಇಲ್ಲಿ ಪ್ರತಿ ವರ್ಷ ತುಂಬಬೇಕು. ಯಾವ ನ್ಯಾಯ? ಬೆಂಗಳೂರು ಜನ ಬಹಳ ಬಿಜಿ ಇದ್ದಾರೆ, ಉಳಿದವರು ಖಾಲಿ ಕೂತಿದ್ದಾರೆ ಎಂದು ಅರ್ಥವಾ? ವರ್ಷಕ್ಕೆ ಅಲ್ಲಿ, ಇಲ್ಲಿ ಐದು ವರ್ಷ ಅದನ್ನು ಸಮರ್ಪಕವಾಗಿ ಮಾಡಿ ಎಂದು ನಾನು ಹೇಳುತ್ತಿದ್ದೇನೆ. ತಾವು ಹೇಳಿದಿರಿ ಒಬ್ಬರಿಗೆ ಒಂದು ನ್ಯಾಯ, ಒಬ್ಬರಿಗೆ ಒಂದು ಕಾನೂನು ಇಲ್ಲವೆಂದು ಎಲ್ಲಾ ಕಾನೂನು ರಾಜ್ಯದಲ್ಲಿ ಒಂದೇ ಎಂದು ಹೇಳುತ್ತೀರಿ. ಆದರೆ ಇವತ್ತು ಬೇಸಿಕ್ಕಾಗಿ ನೋಡಬೇಕಾಗಿದೆ. ನೀರಿನ ಸಮಸ್ಯೆ ಎಷ್ಟು ಇದೆ, ಯಾರೋ ಒಬ್ಬ ಬೋರ್‌ವೆಲ್ ಹಾಕಿದರೆ ಅವನಿಗೆ ಸಬ್ಸಿಡಿ ಕೊಡಬೇಕು. ಅಂತಹ ಸಮಸ್ಯೆ ಇದೆ. ಈ ವ್ಯವಸ್ಥೆ ಮೇಲೆ ಡಿಪೆಂಡಿಬಿಲಿಟಿ ಕಡಿಮೆ ಆಗುತ್ತದೆ. ಅಂತಹವರಿಗೆ ಅದನ್ನು ನವು ಕ್ಯಾಲುಕಲೇಷನ್ ಮಾಡುತ್ತೀರಿ.

1.20 ಪಿ.ಎಂ

ಕಾಂಪೌಂಡ್ ವಾಲ್ ಕಟ್ಟಿಸಿದರೆ ಕ್ಯಾಲಿಕ್ಯುಲೇಶನ್ ಮಾಡುತ್ತೀರಿ. ಒಂದು ವೇಳೆ ಗಾರ್ಡ್‌ನ್ ಮಾಡಿದರೆ ಅದಕ್ಕೂ ನೀವು ಟ್ಯಾಕ್ಸ್ ಇಂಪೋಸ್ ಮಾಡುತ್ತೀರಿ. ಹೀಗಾಗಿ ಮೂರು ಬೇಸಿಕ್ ವಿಚಾರಗಳೇನಿವೆ ಅದರಲ್ಲಿ ಮೊದಲನೆಯದು ಆಪ್‌ಶನಲ್ ಮಾಡುವುದು, ಎರಡನೆಯದಾಗಿ ಕ್ಯಾಪಿಟಲ್ ಬೇಸ್ ಏನಿದೆ ಅದನ್ನು ತೆಗೆದು ರೆಂಟಲ್ ಬೇಸ್ ಮಾಡಿ, ಮೂರನೆಯದಾಗಿ ರಿವಿಶನ್ ಮಾಡುವ ಅವಧಿಯನ್ನು ಒಂದು ವರ್ಷಕ್ಕೆ ಎಂದು ಏನಿದೆ ಅದನ್ನು 5 ವರ್ಷಕ್ಕೆ ಎಂದು ಮಾಡಿ. ಇವು ಬೇಸಿಕ್ ವಿಚಾಖಯಗಳು ಇನ್ನೂ ಹಲವಾರು ವಿಚಾರಗಳಿವೆ. ಸದ್ಯಕ್ಕೆ ಈ ಬೇಸಿಕ್ ವಿಚಾರಗಳನ್ನಾದರೂ ತಾವು ತಿದ್ದುಪಡಿಯಲ್ಲಿ ತೆಗೆದುಕೊಂಡು ಬನ್ನಿ. ಅದಕ್ಕೇ ನಾನು ಹೇಳುತ್ತಿರುವುದು. ಈ ವಿಚಾರಗಳ ಬಗ್ಗೆ ನಾವೆಲ್ಲರೂ ವಿಚಾರ ಮಾಡೋಣ, ಚರ್ಚೆ ಮಾಡೋಣ. ಮೂಲಭೂತವಾಗಿ ಈ ಸ್ವಯಂ ಘೋಷಿತ ತೆರಿಗೆ ಪದ್ಧತಿಯ ಕಾನೂನು ಏನಿದೆ ಅದಕ್ಕೆ ನಮ್ಮ ಪಕ್ಷದ ವಿರೋಧವೇನೂ ಇಲ್ಲ. ಇದನ್ನು ಅಡಾಪ್ಟ್ ಮಾಡಿಕ್ಕೊಳ್ಳೋಣ. ಅದಕ್ಕೆ ಚರ್ಚೆ ಮಾಡೋಣ. ಇನ್‌ಪ್ರಿನ್ಸಿಪಲ್ ನಮ್ಮ ಒಪ್ಪಿಗೆ ಇದೆ. ಆದರೆ ಅದರಲ್ಲಿ ಕೆಲವು ನಿಯಮಾವಳಿಗಳನ್ನು ತಾವೇನು ಮಾಡಿದ್ದೀರಿ, ಕೆಲವೊಂದು ಕ್ಲಾಸಸ್ ಮಾಡಿದ್ದೀರಿ ಅದಕ್ಕೆ ನಮ್ಮ ವಿರೋಧವಿದೆ. ಆದಕಾರಣ ಇದಕ್ಕೆ ಈ ವಿಚಾರಗಳಲ್ಲಿ ಚರ್ಚೆ ಮಾಡಿ ತಿದ್ದುಪಡಿ ಮಾಡದೇ

ಹಾಗೆಯೇ ಇದನ್ನು ಕಂಟಿನ್ಯೂ ಮಾಡಿದರೆ ಬಹುಶಃ ಇಡೀ ರಾಜ್ಯದಲ್ಲಿರುವ ನಾಗರಿಕರಿಗೆ ಸಹಿಸಿಕೊಳ್ಳುವುದಕ್ಕೆ ಆಗುವುದಿಲ್ಲ. ನೀವು ಬೇಕಾದರೆ ನಿಮ್ಮ ಪಕ್ಷದ ಶಾಸಕರನ್ನೇ ಒಬ್ಬೊಬ್ಬರನ್ನಾಗಿ ಕರೆದು ಈ ಬಗ್ಗೆ ಮಾತನಾಡಿ. ಅವರು ನಿಮಗೆ ತಮ್ಮ ತಮ್ಮ ಕ್ಷೇತ್ರಗಳಲ್ಲಿ ಇ ಬಿಲ್‌ಗೆ ಏನು ಅಪೋಸ್ ಮಾಡುತ್ತಿದ್ದಾರೆ ಜನರು ಎಂಬ ಬಗ್ಗೆ ಹೇಳುತ್ತಾರೆ. ಇಲ್ಲಿ ಅವರು ಓಪನ್ ಆಗಿ ಹೇಳುತ್ತಿಲ್ಲ. ನಿಜವಾಗಿ ಅವರೆಲ್ಲರೂ ಹೇಳಬೇಕಾಗಿತ್ತು. ನೀವು ಬೇಕಾದರೆ ಅವರನ್ನು ವೈಯಕ್ತಿಕವಾಗಿ ಕರೆದು ಮಾತನಾಡಿ. ಇನ್ನೂ ಎನಾದರೂ ಸುಧಾರಣೆ ತರುವುದಕ್ಕೆ ಸಾಧ್ಯವಿದೆ. ಅದಕ್ಕಾಗಿ ಆ ಬಗ್ಗೆ ಸಾಕಷ್ಟು ಚರ್ಚೆ ಮಾಡೋಣ. ನೀವು ಜಂಟಿ ಸದನ ಸಮಿತಿಯನ್ನು ಮಾಡಿ. ಅದಕ್ಕೆ ಈ ಬಿಲ್‌ನ್ನು ಕಳುಹಿಸಿ. ಹತ್ತು ದಿನಗಳೊಳಗೆ ಅಥವಾ ಒಂದು ತಿಂಗಳೊಳಗೆ ಪರಿಶೀಲನೆ ಮಾಡಿ ಹೊಸ ಬಿಲ್‌ನ್ನು ತೆಗೆದುಕೊಂಡು ಬನ್ನಿ. ಮುಂದಿನ ಅಧಿವೇಶನದಲ್ಲಿ ಅಮೂಲಾಗ್ರವಾದ ಬದಲಾವಣೆಗಳನ್ನು ಮಾಡಿ ಅಮೆಂಡ್‌ಮೆಂಟ್ ತೆಗೆದುಕೊಂಡು ಬನ್ನಿ. ಆಗ ಆ ಬಿಲ್‌ನ್ನು ಸಂಪೂರ್ಣವಾದ ಸಹಮತದೊಂದಿಗೆ ಇಲ್ಲಿ ಪಾಸ್ ಮಾಡೋಣ. ಏಕೆಂದರೆ ಸ್ಥಳೀಯ ಸಂಸ್ಥೆಗಳಿಗೆ ಹೆಚ್ಚು ಇನ್‌ಕಂ ಬೇಕಾಗಿದೆ. ಆ ದೃಷ್ಟಿಕೋನದಿಂದ ಬಹುಶಃ ನೀವು ಕನ್‌ವಿನ್ಸ್ ಆಗುತ್ತೀರಿ ಎಂದು ನನಗೆ ಕಾಣುತ್ತಿದೆ. ಏಕೆಂದರೆ ತಾವು ಹೇಳಿದಿರಿ. ಹೆಚ್ಚಿನ ಸುಧಾರಣೆಯನ್ನು ಇದರಲ್ಲಿ ತರಬೇಕು, ಸ್ಥಳೀಯ ಸಂಸ್ಥೆಗಳಿಗೆ ಹೆಚ್ಚಿನ ರೆವಿನ್ಯೂ ಬರಬೇಕು ಎನ್ನುವಂಥ ವಿಚಾರಗಳನ್ನು ತಾವು ಹೇಳುತ್ತಿದ್ದೀರಿ. ಅದಕ್ಕೆ ನಮ್ಮ ಸಂಪೂರ್ಣವಾದ ಒಪ್ಪಿಗೆ ಇದೆ. ಆದಕಾರಣ ನೀವು ಇದನ್ನು ಜಂಟಿ ಸದನ ಸಮಿತಿ ಮಾಡಿ ಅದಕ್ಕೆ ಈ ಬಿಲ್‌ನ್ನು ರೆಫರ್ ಮಾಡಿದರೆ ಅಮೂಲಾಗ್ರವಾಗಿ ಬದಲಾವಣೆಗಳನ್ನು ತರಲು ಸಾಧ್ಯವಾಗುತ್ತದೆ.

ಶ್ರೀ ಡಿ.ಕೆ ಶಿವಕುಮಾರ್ : ಈಗ ಒಂದು ವ್ಯಾಲಿಡ್ ಪಾಯಿಂಟ್‌ನ್ನು ಹೇಳಿದ್ದಾರೆ. ಈಗ ಮಾನ್ಯ ಸುರೇಶ್‌ಕುಮಾರ್‌ರವರೂ ಕೂಡ ಇಲ್ಲಿದ್ದಾರೆ. ಅವರೂ ನಗರಪಾಲಿಕೆ ಸದಸ್ಯರಾಗಿ ಕೆಲಸ ಮಾಡಿ ಶಾಸಕರಾಗಿ ಇಲ್ಲಿಗೆ ಬಂದಿದ್ದಾರೆ. ಈಗ ಬೆಂಗಳೂರಿನಲ್ಲಿ ಎಸ್.ಎ.ಎಸ್. ಸ್ಕೀಂನಲ್ಲಿ ಅಪಶನಲಿರುವುದು ನಿಜ. ನಾನು ಇಲ್ಲ ಎಂದು ಹೇಳುವುದಕ್ಕೆ ಹೋಗುವುದಿಲ್ಲ. ನಗರಪಾಲಿಕೆ ಅಧಿಕಾರಿಗಳು ಈ ಅಸೆಸ್‌ಮೆಂಟ್‌ನ್ನು ಒಪ್ಪಲಿಲ್ಲ ಎಂದರೆ, ಎಸ್.ಎ.ಎಸ್. ಮುಖಾಂತರವೇ ಬಹುಶಃ ಅವರೇ ಲೆಕ್ಕಾಚಾರ ಮಾಡಿ ಕೊಡುವುದಕ್ಕೆ ಅವಕಾಶವಿದೆ. ಆ ಒಂದು ರೆಂಟಲ್ ವಿಚಾರದಲ್ಲಿ ರೇಟು ಮತ್ತೊಂದು ಇರುವುದರಿಂದ, ಕೋರ್ಟ್ ಡೈರೆಕ್ಷನ್ಸ್, ಹೀಗೆ ಇವೆಲ್ಲಾ ಇರುವುದರಿಂದ ಈ ಒಂದು ಪದ್ಧತಿಯಲ್ಲಿ ತಮಗೆ ತಾರತಮ್ಯ ಕಾಣುತ್ತಿದೆಯೇ ಹೊರತು ಇಲ್ಲಿ ಪ್ರತಿಯೊಂದು ವಿಚಾರದಲ್ಲೂ ಎಷ್ಟು ಟ್ರಾನ್ಸ್‌ಫರೆನ್ಸಿ ಇದೆ ಎಂದು ಬಹುಶಃ ಬಿಸಿನೆಸ್‌ನಲ್ಲಿರುವವರನ್ನು ಅಥವಾ ಮನೆಗಳವರನ್ನು ಕೇಳಿದರೆ ಬಹುಶಃ ಗೊತ್ತಾಗುತ್ತದೆ.

ಶ್ರೀ ಜಗದೀಶ್ ಶೆಟ್ಟರ್ : ಆದರೆ ಬೆಂಗಳೂರಿನಲ್ಲಿ ಪ್ರತಿ ಐದು ವರ್ಷಕ್ಕೊಮ್ಮೆ ರಿವಿಶನ್ ಮಾಡಿಸಬೇಕು ಎಂದು ಇದೆ. ಬೇರೆ ಕಡೆಯವರಿಗೆ ಒಂದು ವರ್ಷಕ್ಕೆ ರಿವಿಶನ್ ಮಾಡಿಸಬೇಕು ಎಂದರೆ ಹೇಗಾಗುತ್ತದೆ.

ಶ್ರೀ ಡಿ.ಕೆ. ಶಿವಕುಮಾರ್ : ಎರಡು ವರ್ಷಕ್ಕೊಮ್ಮೆ.

ಶ್ರೀ ಜಗದೀಶ್ ಶೆಟ್ಟರ್ : ಎರಡು ವರ್ಷಕ್ಕೊಮ್ಮೆ ಅಲ್ಲ. ಬೆಂಗಳೂರಿನಲ್ಲಿ ಐದು ವರ್ಷಕ್ಕೊಮ್ಮೆ ರಿವಿಷನ್ ಮಾಡುತ್ತೀರಿ. ಬೇರೆ ಕಡೆ ಇದನ್ನು ಒಂದು ವರ್ಷಕ್ಕೆ ಮಾಡಬೇಕೆನ್ನುತ್ತೀರಿ.

Sri.D.K. Shivakumar : How can we do it at five years? It is left to the Revenue Department to fix up the value.

ಶ್ರೀ ಜಗದೀಶ್ ಶೆಟ್ಟರ್ : ನೀವು ಬೇಕಾದರೆ ನಿಮ್ಮ ಅಧಿಕಾರಿಗಳಿಂದ ಮಾಹಿತಿ ತರಿಸಿಕೊಂಡು ನೋಡಿ. ಪ್ರತಿ ವರ್ಷ ಇಲ್ಲಿ ಎಸ್.ಎ.ಎಸ್. ಫಾರಂ ತುಂಬಬೇಕು. ನಿಮ್ಮ ಆಕ್ಟ್ ಪ್ರಕಾರ. ಬೆಂಗಳೂರು ಮಹಾನಗರದಲ್ಲಿ ಹಾಗಲ್ಲ. ಪ್ರತಿ ಐದು ವರ್ಷಕ್ಕೊಮ್ಮೆ ಫಾರಂ ತುಂಬಬೇಕು.

ಶ್ರೀ ಡಿ.ಕೆ. ಶಿವಕುಮಾರ್ : ನೋ, ನೋ, ನೋ, ನಾನೇ ನನ್ನ ಪ್ರಾಪರ್ಟಿಗೆ ಪ್ರತಿ ವರ್ಷ ಫಾರಂ ತುಂಬಿಸಿ ಕಳುಹಿಸಿದ್ದೇನೆ. ಏನು ಸುರೇಶ್ ಕುಮಾರ್‌ರವರೆ, ನೀವು ನಿಮ್ಮ ಮನೆಗೆ ಫಾರಂನ್ನು ಪ್ರತಿ ವರ್ಷ ತುಂಬಿಸಿ ಕಳುಹಿಸಿಸುತ್ತಿದ್ದೀರೋ ಅಥವಾ ಐದು ವರ್ಷಗಳಿಗೊಮ್ಮೆ ತುಂಬಿಸಿ ಕಳುಹಿಸುತ್ತಿದ್ದೀರೋ.

Sri S. Sureshkumar : There is a confusion. ಸಾರ್ ತಾವು ಹೇಳುವುದು, ಪ್ರತಿ ವರ್ಷ ಟ್ಯಾಕ್ಸ್‌ನ್ನು ಕಟ್ಟುತ್ತಿದ್ದೇವೆ. ಟ್ಯಾಕ್ಸ್‌ನ್ನು ಪ್ರತಿ ವರ್ಷವೂ ಕಟ್ಟಬೇಕು. ಆದರೆ ಒಂದು ಬಾರಿ ನಾವು ಫೈಲ್ ಮಾಡಿದ ಮೇಲೆ ಅದನ್ನು ರಿವಿಶನ್ ಮಾಡುವುದು ಆಫ್ಟರ್ ಫೈವ್ ಈಯರ್ಸ್ ಎನ್ನುವುದು ಎಲ್ಲರಿಗೂ ಕೂಡ ಗೊತ್ತಿದೆ. ಆದರೆ ಈ ಕೇಸ್‌ನಲ್ಲಿ ಪ್ರತಿ ವರ್ಷ ರಿವಿಶನ್ ಮಾಡುತ್ತೇವೆ ಎಂದು ಹೇಳುತ್ತಾರೆ. ಎಲೆಕ್ಷನನ್ನೇ ಐದು ವರ್ಷಕ್ಕೊಮ್ಮೆ ಮಾಡುತ್ತೇವೆಯೇ ಹೊರತು ಪ್ರತಿ ವರ್ಷ ನಡೆಸುವುದಿಲ್ಲ. ಹಾಗೆಯೇ ಇದು ಕೂಡ ಒಂದು ಸಲ ರಿಟರ್ನ್ಸ್ ಫೈಲ್ ಮಾಡಿದ ಮೇಲೆ ಐದು ವರ್ಷಗಳವರೆಗೆ ಅದು ಹಾಗೆಯೇ ಇರುತ್ತದೆ. ಮಧ್ಯೆದಲ್ಲಿ ನಿಮಗೇನಾದರೂ ರಿಟರ್ನ್ಸ್ ಬಗ್ಗೆ ಡೌಟ್ ಬಂದರೆ, ಅವರು ಸೆಲ್ಫ್ ಅಸೆಸ್‌ಮೆಂಟ್‌ನಲ್ಲಿ ಎಲ್ಲಾದರೂ ಸುಳ್ಳು ಹೇಳಿದ್ದರೆ, ಸುಳ್ಳು ಮಾಹಿತಿ ಕೊಟ್ಟಿದ್ದರೆ, ತಪ್ಪು ಮಾಹಿತಿ ಕೊಟ್ಟಿದ್ದರೆ Corporation Authorites have got every right. ಅವರು ಅಲ್ಲಿಗೆ ಹೋಗಿ ಚೆಕ್ ಮಾಡಿ ಆ ಬಗ್ಗೆ ವೆರಿಫೈ ಮಾಡಬೇಕು. ಅದನ್ನು ಬಿಟ್ಟು ಸಾರಾಸಗಟಾಗಿ ನೀವು ಪ್ರತಿ ವರ್ಷ ರಿವಿಶನ್ ಮಾಡುವುದು ಸೂಕ್ತವಲ್ಲ ಎನ್ನುವುದು ಎಲ್ಲರ ಭಾವನೆ.

ಶ್ರೀ ಡಿ.ಕೆ. ಶಿವಕುಮಾರ್ : ನೋಡೋಣ. ಮೊದಲು ಇವೆಲ್ಲಾ ಆಗಲಿ then we will come back. We will have a discussion.

ಶ್ರೀ ಜಗದೀಶ್ ಶೆಟ್ಟರ್ : ಈ ಬಿಲ್ ಪಾಸ್ ಮಾಡುವ ಮುಂಚೆಯೇ ಅವುಗಳನ್ನೆಲ್ಲಾ ತಿದ್ದುಪಡಿಯಲ್ಲಿ ಅಡಾಪ್ಟ್ ಮಾಡಿ ಪರಿಪೂರ್ಣವಾದ ಬಿಲ್‌ನ್ನು ತಾವು ಮಾಡಿ.

ಶ್ರೀ ಡಿ.ಕೆ. ಶಿವಕುಮಾರ್ : ಬೆಂಗಳೂರು ಸಿಟಿ ಕಾರ್ಪೊರೇಶನ್‌ಗೆ ನಿಮ್ಮನ್ನು ಕರೆದುಕೊಂಡು ಹೋಗಬೇಕು. ಅಲ್ಲಿ ನೀವು ಮತ್ತು ನಾವೆಲ್ಲರೂ ನೋಡಿ.....

ಶ್ರೀ ಜಗದೀಶ್ ಶೆಟ್ಟರ್ : ಅದನ್ನು ಮುಂದೆ ಮಾಡುವುದಲ್ಲ. ಈ ಅಮೆಂಡ್‌ಮೆಂಟ್ ಬಿಲ್‌ನ್ನು ತರುವುದಕ್ಕೇ ಈಗಾಗಲೇ ಒಂದು ವರ್ಷ ಕಾಲ ಹಿಡಿಯಿತು. ನಾವು ಪ್ರತಿ ಸದನದಲ್ಲೂ ಚರ್ಚೆ ಮಾಡುತ್ತಿದ್ದೆವು. ಈಗ ಇನ್ನು ಮುಂದೆ ನೋಡೋಣ ಎಂದರೆ ಅಷ್ಟರೊಳಗೆ ನಿಮ್ಮ ಸರ್ಕಾರದ ಅಧಿಕಾರದ ಅವಧಿಯೇ ಮುಗಿದಿರುತ್ತದೆ.

ಶ್ರೀ ಡಿ.ಕೆ. ಶಿವಕುಮಾರ್ : ಇಲ್ಲಿ ತಂದಿರುವುದು general as a State. ಬೆಂಗಳೂರು ಸಿಟಿಗೆ ಮಾತ್ರ ಎಂದಲ್ಲ. ಎಲ್ಲರೂ ಕೂಡ ಒಂದೇ ಸಿಸ್ಟಂನ್ನು ಅಡಾಪ್ಟ್ ಮಾಡಿಕೊಳ್ಳಲೇಬೇಕು.

ಶ್ರೀ ಜಗದೀಶ್ ಶೆಟ್ಟರ್ : ಬೆಂಗಳೂರೇ ಒಂದು ರಾಜ್ಯ. ಬೆಂಗಳೂರು ಬಿಟ್ಟು ಮತ್ತೊಂದು ರಾಜ್ಯ ಹೀಗಾಗುತ್ತಿದೆ.

ಶ್ರೀ ಡಿ.ಕೆ. ಶಿವಕುಮಾರ್ : ನಾವು ತಂದಿರುವುದು ಇಡೀ ರಾಜ್ಯಕ್ಕೇ ಒಂದೇ ರೀತಿಯ ಸಿಸ್ಟಂನ್ನು. There is no differentiation between Bangalore and other cities.

ಶ್ರೀ ಸಿ. ಚೆನ್ನಿಗಪ್ಪ : ಈಗ ಅಮೆಂಡ್‌ಮೆಂಟ್ ತರುವಾಗಲೇ ಆ ವಿಚಾರಗಳನ್ನೂ ಸೇರಿಸಿಯೇ ಅಮೆಮಡ್‌ಮೆಂಟ್‌ಗೆ ಬಿಲ್‌ನ್ನು ತಂದು ಬಿಟ್ಟಿದ್ದರೆ ಸರಿ ಇರುತ್ತಿತ್ತು. ಈಗ ಬದಲಾವಣೆ ಮಾಡಬೇಕು ಎನ್ನುವ ವಿಚಾರವೇ ಬರುತ್ತಿರಲಿಲ್ಲ.

ಶ್ರೀ ಎ. ರಾಮದಾಸ್ : ತಾವು ಹೇಳಿದ್ದು ಸರಿ. ಆದರೆ ಬೆಂಗಳೂರು ಮಹಾನಗರದಲ್ಲಿ ಅಪ್‌ಶನ್ ಕೊಟ್ಟಿರುವಂಥದ್ದು ಒಂದೇ. ಎರಡನೆಯದಾಗಿ ನಮ್ಮ ಮಾನ್ಯ ಸೋಮಶೇಖರ್‌ರವರು ಮಾತನಾಡುವಾಗ ಕೆಲವು ವಿಚಾರಗಳನ್ನು ಹೇಳಿದರು. ಸ್ಲ್ಯಾಬ್ಸ್‌ನ್ನು ತಂದಿದ್ದಾರೆ, ಮೆಜೆಸ್ಟಿಕ್ ಏರಿಯಾಗೆ ಎಷ್ಟು ಇಂದಿರಾನಗರಕ್ಕೆ ಎಷ್ಟು ರಾಜಾಜಿನಗರಕ್ಕೆ ಎಷ್ಟು ಎಂದು ಜೋನ್ಸ್‌ಗಳನ್ನಾಗಿ ಮಾಡಿ ಈ ರೀತಿಯಾದ ವ್ಯವಸ್ಥೆಯನ್ನು ಅಲ್ಲಿ ಕ್ರಿಯೇಟ್ ಮಾಡಿದ್ದಾರೆ. ಅಂದರೆ ಜೋನ್‌ಗಳನ್ನಾಗಿ ಮಾಡಿ ಒಂದೊಂದು ಪ್ರದೇಶಕ್ಕೂ ಒಂದೊಂದು ರೀತಿಯಾದಂಥ ಸ್ಲ್ಯಾಬ್ಸ್‌ನ್ನು ಮಾಡಿರುವ ವ್ಯವಸ್ಥೆ ಇಲ್ಲಿದೆ. ಆದರೆ ಇಲ್ಲಿ ನೀವು ಏನು ಮಾಡಿದ್ದೀರೆಂದರೆ ಇನ್ ಟೋಟಲ್ ಪ್ರತಿ ವರ್ಷ ಯಾರು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ರಿವಿಶನ್ ಮಾಡಿಬಿಡುತ್ತೀರಿ ಸೆಕ್ಷನ್ 45(ಬಿ) ಪ್ರಕಾರದಲ್ಲಿ. ಆದರೆ ಪ್ರತಿ ವರ್ಷವೂ ಕೂಡ ಅದೇ ದರದಲ್ಲಿ ಏರಿಕೆ ಮಡುವ ವ್ಯವಸ್ಥೆ ಇದೆಯಲ್ಲಾ ಅದನ್ನು ನಾವು ವಿರೋಧ ಮಾಡುತ್ತೇವೆ. ನಾವು ಇವೊತ್ತೂ ಹೇಳುತ್ತಿದ್ದೇವೆ. ಮೊದಲು ಇದು ಬಂದಂಥದ್ದು ಚೆನ್ನೈನಲ್ಲಿ ಕಳೆದ 9 ವರ್ಷಗಳ ಹಿಂದೆ ಚೆನ್ನೈನಲ್ಲಿ ಈ ಪದ್ಧತಿಯನ್ನು ಜಾರಿಗೆ ತಂದರು. ಇವೊತ್ತಿಗೂ ಕೂಡ ಸೆಲ್ಫ್ ಅಸೆಸ್‌ಮೆಂಟ್ ಸ್ಕೀಂನ್ನು ನಾವು ಸ್ವಾಗತ ಮಾಡುತ್ತೇವೆ. ಆದರೆ 45(ಬಿ)ಯನ್ನು ತಾವೇನು ಅಪ್ಲೈ ಮಾಡುತ್ತಿದ್ದೀರಲ್ಲಾ ಇದು un-Constitutional. ಆರ್ಟಿಕಲ್ 14 ಪ್ರಕಾರವಾಗಿ ಎಲ್ಲವನ್ನೂ ಹೇಳಿಕೊಂಡು ಬಂದೆ. ಮಾನ್ಯ ಶಿವಕುಮಾರ್‌ರವರು ಇಂಥ ಬಿಲ್‌ನ್ನು ತಂದರು ಎಂದು ನಾವು ಸಂತೋಷಪಡುತ್ತೇವೆ. ನಾಳೆ ಇದು ಅವೈಜ್ಞಾನಿಕವೆಂದು ಎದುರುಗಡೆ ಕೋರ್ಟ್‌ನಲ್ಲಿ ಈ ಬಗ್ಗೆ ಸ್ಟೇ ಆದರೆ ನಾವು ಶಾಸನ ಮಾಡಿ ಏನು ಪ್ರಯೋಜನವಾಗುತ್ತದೆ. ಆದಕಾರಣ ದಯವಿಟ್ಟು ಅದರ ಬಗ್ಗೆ ಯೋಚನೆ ಮಾಡಿ. ಇನ್ನು ಎರಡನೆಯದಾಗಿ ಬಿಲ್ಡಿಂಗ್ ಬಗ್ಗೆ ಹೇಳುತ್ತೇನೆ. ವೇಕೆಂಟ್ ಲ್ಯಾಂಡ್ ಇದ್ದರೆ ಅದರ ಬಗ್ಗೆ ನೀವೇನು ಬೇಕಾದರೂ ಮಾಡಿಕೊಳ್ಳಿ. ಆದರೆ ಯಾವ ಭೂಮಿಯಲ್ಲಿ ಮನೆಯನ್ನು ಕಟ್ಟಿದ್ದಾರೋ ಆ ಪ್ರದೇಶದಲ್ಲಿರುವ ಭೂಮಿಗಳಿಗೆ ಗಿಡವನ್ನು ಬೆಳೆಯುವುದಕ್ಕೆ ವ್ಯವಸ್ಥೆ ಮಾಡುವ ದೃಷ್ಟಿಯಿಂದ ಅದಕ್ಕೆ ಪ್ರತ್ಯೇಕವಾದಂಥ ತೆರಿಗೆಯನ್ನು ಹಾಕುವುದು ಬೇಡ ಎನ್ನುವಂಥದ್ದು. ಇದರ ಜೊತೆಗೆ ಐದು ವರ್ಷಕ್ಕೊಮ್ಮೆ ಅಸೆಸ್‌ಮೆಂಟ್ ಎಂದು ತಾವು ಹೇಳಿದಿರಿ ಅದು ಹಳೆಯ ಪ್ರಾವಿಶನ್‌ನಲ್ಲಿದೆ. ಅದಕ್ಕೇ ನಾನು ಹೇಳಿದ್ದು, ಈ ಕ್ಲಾಸ್‌ನ್ನು ಒಮಿಟ್ ಮಾಡಬೇಡಿ. ಅದನ್ನು ಹಾಗೆಯೇ ಇಟ್ಟುಕೊಳ್ಳಿ. ಆಗ ಐದು ವರ್ಷಕ್ಕೊಮ್ಮೆ ಇದನ್ನು ತರುವುದಕ್ಕೆ ಸಾಧ್ಯವಾಗುತ್ತದೆ. ದಯವಿಟ್ಟು ಅದಕ್ಕೆ ಪ್ರಾವಿಶನ್ ಮಾಡಿ.

ಶ್ರೀ ಡಿ.ಕೆ. ಶಿವಕುಮಾರ್ : ಈಗ ನಾನು ಜಾಸ್ತಿ ಇದ್ದದ್ದನ್ನು ಕಡಿಮೆ ಮಾಡುವುದಕ್ಕಾಗಿ ಈ ಅಮೆಂಡ್‌ಮೆಂಟ್‌ನ್ನು ತಂದಿರುವುದು. ಬೆಂಗಳೂರಿಗೆ ಸೆಲ್ಫ್ ಅಸೆಸೆಮೆಂಟ್ ಸ್ಕೀಂ ಬಂದಾಗ

ತಾವೆಲ್ಲರೂ ಗಲಾಟೆ ಮಾಡಿದಾಗ ನಿಮಗೆ ಐದು ವರ್ಷದವರೆಗೆ ಒಂದು ಅವಕಾಶವನ್ನು ಮಾಡಿಕೊಡಲಾಗುವುದು ಎಂದು ಹೇಳಿ ಒಂದು ಅವಕಾಶವನ್ನು ಮಾಡಿಕೊಟ್ಟಿತ್ತು. ಈಗ ನಾಲ್ಕು ವರ್ಷಗಳು ಮುಗಿದುಹೋಗಿದೆ. ಇನ್ನೊಂದು ವರ್ಷಕ್ಕೆ ಈ ಅಮೆಂಡ್‌ಮೆಂಟ್ ಬಿಲ್ ಪಾಸ್ ಆದ ತಕ್ಷಣ every year it has to continue. How can we make it? ಬೆಂಗಳೂರಿಗೆ ಒಂದು, ಹೊರಗಿನ ಊರಿಗೇ ಬಂದು ಎಂದು ಹೇಗೆ ಮಾಡುವುದಕ್ಕೆ ಸಾಧ್ಯವಾಗುತ್ತದೆ? ಆ ರೀತಿ ಮಾಡಿದರೆ ನೀವು ನನ್ನನ್ನು ಕೋರ್ಟಿಗೆ ನಿಲ್ಲಿಸಿಬಿಡುತ್ತೀರಷ್ಟೆ. We will not do it. ಆದ್ದರಿಂದ ತಾವು ಗಾಬರಿಯಾಗುವುದು ಬೇಡ. ತಮ್ಮ ವಿಶ್ವಾಸದಂತೆ, ತಮ್ಮ ನಂಬಿಕೆಯಂತೆ ಇದನ್ನು ನಾವು ಪಾಸ್ ಮಾಡಿಸಿಕೊಳ್ಳುವಂಥ ಕೆಲಸವನ್ನು ನಾವು ಮಾಡುತ್ತೇವೆ.

ಶ್ರೀ ಜಗದೀಶ್ ಶೆಟ್ಟರ್ : ಬೆಂಗಳೂರಿಗೆ ಇದನ್ನು ಅಪ್ಲೈ ಮಾಡಿರುವ ಬಗ್ಗೆ ನಾವು ಹೇಳುತ್ತಿಲ್ಲ. ಅದೇ ರೀತಿ ಎಂಟೈರ್ ಸ್ಟೇಟ್‌ಗೆ ಅಪ್ಲೈ ಮಾಡಿ ಎಂದು ಹೇಳುತ್ತಿದ್ದೇವೆ. ಅದನ್ನು ನೀವು ಈ ಅಮೆಂಡ್‌ಮೆಂಟ್‌ನಲ್ಲಿ ತೆಗೆದುಕೊಂಡು ಬನ್ನಿ.

Sri. D.K. Shivakumar :- Deginitely we will do it. I am telling. this amendment is for the entire State.

Sri. Jagadeesh Shettar :- What is Bangalore? whatever clause is added in Bangalore system that is to be applied to entire State.

Sri. D.K. Shivakumar :- I am assuring you in the House this amendment is for entire State.

Sri. Jagadeesh Sheettar :- You have to add the clauses of Bangalore also to entire State.

ಶ್ರೀ ಡಿ.ಕೆ. ಶಿವಕುಮಾರ್ : ಯಸ್, ಯಸ್. ಇದರಲ್ಲಿ ಡಿಫರೆನ್‌ಶಿಯೇಟ್ ಇಲ್ಲ. ಗುಲ್ಬರ್ಗಾಕ್ಕೆ, ಏನಿದೆ, ಹುಬ್ಬಳ್ಳಿಗೆ ಏನಿದೆ.....

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಮಾನ್ಯ ಅಧ್ಯಕ್ಷರೆ, ಈ ಬಗ್ಗೆ ಚರ್ಚೆ ಮಾಡೋಣ. ಮೊದಲು ಜಂಟಿ ಸದನ ಸಮಿತಿ ಮಾಡುವುದಕ್ಕೆ ತಾವು ಹೇಳಿ.

ಶ್ರೀ ಬಿ. ಸೋಮಶೇಖರ್ : ಮಾನ್ಯ ಅಧ್ಯಕ್ಷರೆ, ಮಂತ್ರಿಗಳು ತಾತ್ವಿಕವಾಗಿ ಒಪ್ಪಿಕೊಂಡಿದ್ದಾರೆ. ಅದನ್ನು ಇಲ್ಲಿ in the form of amendment ಆಗಿ ಇಲ್ಲಿ ತಂದುಬಿಟ್ಟರೆ ಪಾಸ್ ಮಾಡಿಬಿಡಬಹುದು.

ಶ್ರೀ ಡಿ.ಕೆ. ಶಿವಕುಮಾರ್ : ಇದರಲ್ಲಿ ಅಮೆಂಡ್‌ಮೆಂಟ್ ಏನಿದೆ ಸ್ವಾಮಿ? ಈಗ ಇರುವುದನ್ನು ಇಡೀ ರಾಜ್ಯಕ್ಕೇ ತಂದಿದ್ದೇವೆ ಎಂದು ಹೇಳುತ್ತಿದ್ದೇನಲ್ಲಾ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ : ಬೆಂಗಳೂರಿನ ಸಿಸ್ಟಂನಲ್ಲಿ ಒಳ್ಳೆಯ ಕ್ಲಾಸಸ್‌ಗಳೇನಿವೆ ಅದನ್ನು ತೆಗೆದುಕೊಂಡು ಬನ್ನಿ. we are ready to accept.

ಶ್ರೀ ಎಸ್. ಸುರೇಶ್‌ಕುಮಾರ್ : ಮಾನ್ಯ ಸಚಿವರು ಇದನ್ನು ಇಡೀ ರಾಜ್ಯಕ್ಕೇ ತರುತ್ತೇವೆ ಎಂದು ಹೇಳುತ್ತಿದ್ದಾರೆ. There will be no differentitation ಎಂದು

Sri. D.K. Shivakumar :- Yes,

ಶ್ರೀ ಎಸ್. ಸುರೇಶ್‌ಕುಮಾರ್ : ಅಂದರೆ ಇಲ್ಲಿ ಏನಿದೆಯೋ ಅದನ್ನು ಬೆಂಗಳೂರಿಗೂ ಕೂಡ ಅಡಾಪ್ಟ್ ಮಾಡುತ್ತೇವೆ ಎಂದರ್ಥ ಓ.ಕೆ. ಬೆಂಗಳೂರಿನಲ್ಲಿ ಸೆಲ್ಫ್ ಅಸೆಸ್‌ಮೆಂಟ್ ಸ್ಕೀಂನ್ನು ಇಂಟ್ರಡ್ಯೂಸ್ ಮಾಡಿದಾಗ ಕೊಟ್ಟ ಮೊದಲನೆಯ ಭರವಸೆ ಏನೆಂದರೆ ಇನ್ನು ಮುಂದೆ ಇದರಿಂದ ಜನಕ್ಕೆ ಏನೂ ತೊಂದರೆಯಾಗುವುದಿಲ್ಲ. ಅವರವರ ಆಸ್ತಿಯ ಅಸೆಸ್‌ಮೆಂಟ್‌ನ್ನು ಅವರವರೇ ಮಾಡುತ್ತಾರೆ. ಇನ್ನು ಎರಡನೆಯದಾಗಿ ಒಂದು ಸಲ ನಾವು ಅಸೆಸ್‌ಮೆಂಟ್ ರಿಟರ್ನ್ಸ್ ಫೈಲ್ ಮಾಡಿದ ಮೇಲೆ ಐದು ವರ್ಷದವರೆಗೂ ಯಾವ ರೀತಿಯ ರಿವಿಶನ್ ಇರುವುದಿಲ್ಲ ಎನ್ನುವ ಭರವಸೆಯನ್ನು ಕೊಟ್ಟಿರಿ. ಆ ಭರವಸೆಯ ಮೇರೆಗೆ ಜನರು ಎಲ್ಲರೂ ಕೂಡ ಒಪ್ಪಿಕೊಂಡು ಜನರೆಲ್ಲರೂ ಸೆಲ್ಫ್ ಅಸೆಸ್‌ಮೆಂಟ್ ಸ್ಕೀಂಗೆ ಒಪ್ಪಿಕೊಂಡು ಇಂದು ಬೆಂಗಳೂರಿನಲ್ಲಿರುವ ಎಲ್ಲರೂ ಕೂಡ ಒಪ್ಪಿಕೊಂಡಿದ್ದಾರೆ.

ಶ್ರೀ ಡಿ.ಕೆ. ಶಿವಕುಮಾರ್ : ಈಗಾಗಲೇ ನಾಲ್ಕು ವರ್ಷಗಳು ಆಗಿಹೋಗಿದೆ.

ಶ್ರೀ ಎಸ್. ಸುರೇಶ್‌ಕುಮಾರ್ : ಇರಲಿ, ಇರಲಿ, ಹೀಗಿರುವಾಗ ನೀವು ನಾಲ್ಕು ವರ್ಷವಾಗಿದೆ ಎಂದು ಹೇಳಿಬಿಟ್ಟು ಬೀಳುವವರೆಲ್ಲಾ ಬಿದ್ದರು ಬಲಿಗೆ, ಇನ್ನು ಮಾಡುತ್ತೇವೆ ನಾವು ಎಂದು ತೋರಿಸಿದರೆ ಇದು ಯಾವುದೇ ರಾಜ್ಯಭಾರ ಮಾಡುವ ಆಡಳಿತದ ಲಕ್ಷಣವಲ್ಲ. ನೀವೇನು ಐದು ವರ್ಷ ಎಂದು ಮಾಡಿದ್ದಿರಿ, ಆ ಐದು ವರ್ಷವನ್ನು ಇಡೀ ರಾಜ್ಯಕ್ಕೆ ತೆಗೆದುಕೊಂಡು ಬನ್ನಿ. ಇದರಿಂದ ನಿಮಗೇನೂ ತೊಂದರೆಯಾಗುವುದಿಲ್ಲ. ಪ್ರತಿವರ್ಷ ಟ್ಯಾಕ್ಸ್ ಅಂತೂ ಕಟ್ಟುತ್ತಾರೆ. ನಿಮಗೇನಾದರೂ ಡೌಟ್ ಇದ್ದರೆ, ಈಗ ನಾನು ಕಾರ್ಪೊರೇಷನ್ ಅಧಿಕಾರಿ ಶಿವಕುಮಾರ ಅವರು ಗೊತ್ತಿಲ್ಲದೆ ಸೆಕೆಂಡ್ ಫ್ಲೋರ್ ಕಟ್ಟಿದ್ದಾರೆಂದು ನನಗೆ ಗೊತ್ತಾದ ತಕ್ಷಣ at any time I can go to Shivakumar's house. provided he allows me. ಅಲ್ಲಿ ಹೋಗಿಬಿಟ್ಟು ಅದಿದ್ದರೆ ಜೇಂಜ್ ಮಾಡಿದ್ದಾರೆ ಎಂದು ಫೈನ್ ಹಾಕುತ್ತೀರೋ ಪನಿಶ್‌ಮೆಂಟ್ ಕೊಡುತ್ತಿರೋ, ಕೊಟ್ಟು ಮಾಡಬಹುದು. ಅದು ಬಿಟ್ಟು ಎಲ್ಲರೂ ಇಡೀ ಬೆಂಗಳೂರಿನಲ್ಲಿ ಸುಮಾರಿಯು 30-35 ಲಕ್ಷ ಜನರನ್ನು ಈ ರೀತಿ ಒಂದು ಚುನಾವಣಾ ಭರವಸೆ ತರಹ ಸೆಲ್ಫ್ ಅಸೆಸ್‌ಮೆಂಟ್ ಸ್ಕೀಮ್ ಭರವಸೆ ಕೊಟ್ಟು ಎಲ್ಲರನ್ನೂ ಕೂಡ ಕರೆದುಕೊಂಡು ಈ ಸ್ಕೀಮ್ ಮಾಡಿ, ಈಗ ಇನ್ನು ಒಂದು ವರ್ಷಕ್ಕೆ ಮಾಡುತ್ತೇವೆ ಎನ್ನುವುದನ್ನು ಯಾರೂ ಕೂಡ ಒಪ್ಪುವುದಿಲ್ಲ. ಅದು ನ್ಯಾಯಸಮ್ಮತವಲ್ಲ. ದಯವಿಟ್ಟು ಮೊದಲು ಏನು ಭರವಸೆ ಕೊಟ್ಟಿದ್ದೀರಿ, ಅದನ್ನು ಇವತ್ತು ಇಡೀ ರಾಜ್ಯಕ್ಕೆ ಕೊಡಿ ಎಂದು ನಾನು ಮತ್ತೊಮ್ಮೆ ಮನವಿ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು : ಈಗ 2003ನೇ ಸಾಲಿನ.....

ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ಇದು ಬಹಳ ಕರಾಳವಾಗುತ್ತದೆ. ಇದನ್ನು ನಾವು ವಿರೋಧ ಮಾಡುತ್ತೇವೆ. ದಯವಿಟ್ಟು ಇದನ್ನು ಪಾಸ್ ಮಾಡಬಾರದು. ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ಕೊಡಬೇಕು ಎನ್ನುವುದನ್ನು ಒತ್ತಾಯ ಮಾಡುತ್ತೇವೆ. ಇದನ್ನು ವಿತ್‌ಡ್ರಾ ಮಾಡಬೇಕೆಂದು ಒತ್ತಾಯ ಮಾಡುತ್ತಿದ್ದೇನೆ. ಇವತ್ತು ಇದು ಪಾಸ್ ಆಗುವಂತಹ ಸಂದರ್ಭದಲ್ಲಿ ನಾವು ಪ್ರತಿಭಟನೆ ಮಾಡಿ ಧರಣಿ ಮಾಡುತ್ತೇವೆ.

(ಈ ಹಂತದಲ್ಲಿ ಬಿಜೆಪಿಯ ಸದಸ್ಯರುಗಳು ಬಾವಿಗೆ ಬಂದಿಳಿದರು)

ಅಧ್ಯಕ್ಷರು : 2003ನೇ ಸಾಲಿನ ಕರ್ನಾಟಕ ಪೌರ ನಿಗಮಗಳ ತಿದ್ದುಪಡಿ ವಿಧೇಯಕ.....

ಶ್ರೀ ಬಿ. ಸೋಮಶೇಖರ್ : ಮಾನ್ಯ ಅಧ್ಯಕ್ಷರೆ, ಒಂದು ನಿಮಿಷ ಅವಕಾಶ ಕೊಡಿ. ಈಗ ಏನಾಗಿದೆ ಎಂದರೆ ಮಾನ್ಯ ಶಿವಕುಮಾರ್‌ರವರು ಬಹಳ ಒಳ್ಳೆಯ ಬಿಲ್ ತಂದಿದ್ದಾರೆ. ಅದನ್ನು ತಾವು ವಿರೋಧ ಮಾಡಿಕೊಂಡು ಪಾಸ್ ಮಾಡಿಸಿಕೊಂಡರು ಎನ್ನುವ ಅಭಿಪ್ರಾಯ ಬೇಡ. ಆದರೆ ತಾತ್ವಿಕವಾಗಿ ಎಲ್ಲಾ ರಾಜ್ಯಕ್ಕೂ ಅನ್ವಯವಾಗುತ್ತದೆ ಎಂದು ಒಪ್ಪೊಕೊಂಡಿದ್ದಾರೆ. ಇವರು ಧರಣಿ ಮಾಡುವುದು ಬೇಡ. ವಿರೋಧದಲ್ಲಿ ಪಾಸ್ ಮಾಡಿಸಿಕೊಂಡು ಹೋಗುವಂತಹ ಅನಿವಾರ್ಯತೆ ಕೂಡ ಬೆಡ. ದಯವಿಟ್ಟು ಆ ಬಿಲ್‌ಗೆ ಒಂದು ಅಮೆಂಟ್‌ಮೆಂಟ್ ತನ್ನಿ. ನಾವೆಲ್ಲರೂ ಪಾಸ್ ಮಾಡಿಕೊಳ್ಳೋಣ.

ಶ್ರೀ ಡಿ.ಕೆ. ಶಿವಕುಮಾರ್ : ನಾನು ಇಲ್ಲಿ ರೆಡ್ಯೂಸ್ ಮಾಡುವುದಕ್ಕೆ, ನಿಮಗೆ ಬೆನಿಫಟ್ ಮಾಡುವುದಕ್ಕೆ ತಂದರೆ ನೀವು ವಿರೋಧ ಮಾಡುತ್ತೀರಲ್ಲಾ. I do not know what is your point.

ಶ್ರೀ ಬಿ. ಸೋಮಶೇಖರ್ : ರಾಜ್ಯಕ್ಕೆಲ್ಲಾ ಅನ್ವಯವಾಗುತ್ತದೆನ್ನುವಂತಹ ವಿಚಾರವನ್ನು ಕೇಳಿದ್ದಾರೆ ಅವರು. ಸೆಕ್ಷನ್ 45(ಬಿ)ಗೆ ಒಂದು ಅಮೆಂಡ್‌ಮೆಂಟ್ ಆ ಬಿಲ್ಲಿಗೆ ತನ್ನಿ. ಏಕೆ ವಿರೋಧ ಮಾಡಿಸಿಕೊಳ್ಳಬೇಕು ನೀವು. ಪ್ರತಿ ಸಾರಿಗೂ ನೀವು ಕಾಂಟ್ರವರ್ಸಿ ಆಗುತ್ತಿದ್ದೀರಿ, ಒಳ್ಳೆಯ ಕೆಲಸ ಮಾಡಿದರೂ ನೀವು ಕಾಟ್ರವರ್ಸಿಯಾಗುತ್ತಿದ್ದೀರಿ. You are doing a good work.

ಶ್ರೀ ಡಿ.ಕೆ ಶಿವಕುಮಾರ್ : ನಾವು ಟ್ಯಾಕ್ಸ್ ರೆಡ್ಯೂಸ್ ಮಾಡುವುದಕ್ಕೆ ಈ ಆರ್ಡಿನೆನ್ಸ್ ಇಂಟ್ರಡ್ಯೂಸ್ ಮಾಡಿದ್ದು, ಇವತ್ತು ಇದನ್ನು ಬಿಲ್ ಮುಖಾಂತರ ಮಾಡಿದ್ದೇವೆಯೇ ಹೊರತು.....

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ಕೊನೆಯದಾಗಿ ಇನ್ನೊಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಸೆಕ್ಷನ್ 45(ಬಿ) ಅದನ್ನು ತೆಗೆದುಹಾಕಿ. ನಂತರ ಎವ್ವೆರಿ ಥೈವ್ ಇಯರ್ ಎಂದು ಮಾಡಿ. ಅಟ್‌ಲೀಸ್ಟ್ ಇವೆರಡು ಅಮೆಂಡ್‌ಮೆಂಟ್ ತಂದುಬಿಡಿ. ತಯಾರಿದ್ದೇವೆ.

ಶ್ರೀ ಬಿ. ಸೋಮಶೇಖರ್ : ಒಳ್ಳೆಯ ಕೆಲಸ ಮಾಡಿ ಏಕೆ, ಇದನ್ನು ಈ ರೀತಿ ಮಾಡುತ್ತಿದ್ದೀರಿ. Why don't take the bull credit?

ಶ್ರೀ ಜಗದೀಶ್ ಶೆಟ್ಟರ್ : ಸೆಕ್ಷನ್ 45(ಬಿ)ಯನ್ನು ತೆಗೆಯಿರಿ, ಸೈಟ್ ಮೇಲಿನದ್ದು ತೆಗೆಯಿರಿ. ಹಾಗೂ ಪ್ರತಿ ಐದು ವರ್ಷ ಮಾಡಿ, ಸಾಕು. ಅದನ್ನು ನಾವು ಅಕ್ಸೆಪ್ಟ್ ಮಾಡುತ್ತೇವೆ. ಇದನ್ನು ಪ್ರತಿಷ್ಠೆ ಮಾಡಿಕೊಳ್ಳುವುದು ಬೇಡ. ಇದು ಜನರ ಹಿತದೃಷ್ಟಿಯಿಂದ ಒಳ್ಳೆಯದು. ಎಲ್ಲರೂ ವಿಚಾರ ಮಾಡುವುದು ಜನರ ಹಿತದೃಷ್ಟಿಯಿಂದ ಆದುದರಿಂದ ದಯವಿಟ್ಟು ತಕ್ಷಣ ಅಮೆಂಡ್‌ಮೆಂಟ್ ಮೂವ್ ಮಾಡಿ. ಮತ್ತೆ ಅಕ್ಸೆಪ್ಟ್ ಮಾಡೋಣ. ಅಮೆಂಡ್ ಮೂವ್ ಮಾಡಬಹುದು. ಮಾಡಿದರೆ ಒಳ್ಳೆಯದಾಗುತ್ತದೆ.

ಶ್ರೀ ಸಿ. ಚೆನ್ನಿಗಪ್ಪ : ಕೇವಲ ಮೂರು ಮಾತ್ರ ಬದಲಾವಣೆ ಮಾಡಿದರೆ ಆಕ್ಸೆಪ್ಟ್ ಮಾಡಬಹುದು. ಇಲ್ಲವೆಂದರೆ ನಾವೂ ಕೂಡ ವಿರೋಧ ಮಾಡುತ್ತೇವೆ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ತಾವು ಸರ್ಕಾರಕ್ಕೆ ಬುದ್ಧಿ ಹೇಳಬಹುದು. ತಮ್ಮ ಕ್ಷೇತ್ರಕ್ಕೆ ತಾವು ಹೋಗಬೇಕು. ತಮ್ಮ ಕ್ಷೇತ್ರದಲ್ಲಿ ತಾವು ಜನರನ್ನು ಫೇಸ್ ಮಾಡಬೇಕು. ಜನರ ಹಿತದೃಷ್ಟಿಯಿಂದ ಇದು ಒಳ್ಳೆಯದಲ್ಲ. ಈಗಲಾದರೂ ತಾವು ಮನಸ್ಸು ಮಾಡಿ. ಮಧ್ಯಾಹ್ನ

ಅಮೆಂಡ್‌ಮೆಂಟ್ ಮೂವ್ ಮಾಡಲಿ, ಇವತ್ತೆ ಆಕ್ಸೆಪ್ಟ್ ಮಾಡೋಣ. ಇನ್ನು ಕೆಲವು ಎರಡು ಮೂರು ವಿಷಯಗಳನ್ನು ಸಜೆಸ್ಟ್ ಮಾಡಿದ್ದೇವೆ. ಅದನ್ನು ಸೇರಿಸಿ ಹೊಸದಾಗಿ ತಂದುಬಿಡಿ. ಮಧ್ಯಾಹ್ನ ತೆಗೆದುಕೊಂಡು ಇವತ್ತೆ ಅಕ್ಸೆಪ್ಟ್ ಮಾಡೋಣ.

ಅಧ್ಯಕ್ಷರು : ಈಗ ಒಂದು ಕೆಲಸಮಾಡಿ. ಈಗ ಇದನ್ನು ಪಾಸ್ ಮಾಡೋಣ. ಮತ್ತೆ ಮಾನ್ಯ ಸದಸ್ಯರು ಏನೇನು ಸಲಹೆಗಳನ್ನು ಮಾಡಿದ್ದಾರೆ ಮತ್ತೊಂದು ಆರ್ಡಿನೆನ್ಸ್ ಮೂಲಕ ತನ್ನಿ. ಈಗ ಪಾಸ್ ಮಾಡೋಣ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಅಲ್ಲ ಸಾಯಂಕಾಲದೊಳಗೆ ತರಬಹುದು.

ಅಧ್ಯಕ್ಷರು : ಇಲ್ಲಿ ಜನರ ಹಿತದೃಷ್ಟಿಯಿಂದ ಅವಮಾನ ಏನೂ ಇಲ್ಲ.

ಶ್ರೀ ಜಗದೀಶ್ ಶೆಟ್ಟರ್ : ಅದು ರೆಡಿ ಇಲ್ಲ.

ಅಧ್ಯಕ್ಷರು : ಮಾನ್ಯ ಮಂತ್ರಿಗಳು ಏನು ಹೇಳುತ್ತಾರೆ ನೋಡೋಣ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : 'ಒರಲಿ ಮೂವ್ ಮಾಡಿ. ನಾವು ಒಪ್ಪಿಕೊಳ್ಳುತ್ತೇವೆ.

ಶ್ರೀ ಬಿ. ಸೋಮಶೇಖರ್ : ಈಗ ತಾವು ಒಳ್ಳೆಯ ಅಮೆಂಡ್‌ಮೆಂಟ್ ತಂದಿದ್ದೀರಿ. ನಾವೆಲ್ಲಾ ಅದನ್ನು ಒಪ್ಪಿಕೊಂಡಿದ್ದೇವೆ. ಒಳ್ಳೆಯ ಕೆಲಸ ಎಂದು ಎಲ್ಲರೂ ಒಪ್ಪಿಕೊಂಡಿದ್ದಾರೆ. ಆದರೆ ತಾತ್ವಿಕವಾಗಿ ಇದನ್ನು ತಾವು ಐದು ವರ್ಷಕ್ಕೆ ಒಂದು ಸಾರಿ ರಿವಿಶನ್ ಮಾಡುತ್ತೇವೆಂದು ಒಪ್ಪಿಕೊಂಡಿದ್ದೀರಿ. ಈಗಾಗಲೇ ನಾಲ್ಕು ವರ್ಷವಾಗಿದೆ. ಅದನ್ನು ತಾತ್ವಿಕವಾಗಿ ಒಪ್ಪಿಕೊಂಡ ಮೇಲೆ ಈಗಲೇ ಅಮೆಂಡ್‌ಮೆಂಟ್ ತಂದರೆ ಅದು ಅರ್ಧ ಗಂಟೆ ವರ್ಕ್. ಇದನ್ನು ಸ್ವಾಗತ ಮಾಡಿ ಎಲ್ಲರೂ ಒಪ್ಪಿಕೊಳ್ಳುತ್ತಾರೆ. ಪ್ರತಿಷ್ಠೆಯಾಗಿ ಏಕೆ ತೆಗೆದುಕೊಳ್ಳುತ್ತೀರಿ? ಎರಡಕ್ಕೂ ಅಪ್ಲೈ ಆಗುತ್ತದೆಂದು ಒಪ್ಪಿಕೊಂಡಿದ್ದೀರಿ ನೀವು ತಾವು ಸ್ವಲ್ಪ ಅವರಿಗೆ ಹೇಳಿ.

ಅಧ್ಯಕ್ಷರು : ಮಂತ್ರಿಗಳು ಏನು ಹೇಳುತ್ತಾರೆ ನೋಡೋಣ. ನಾನು ಹೇಳಿ ಆಯಿತು ಅವರಿಗೆ. ತಾವು ಏನು ಸಲಹೆಗಳನ್ನು ಕೊಟ್ಟಿದ್ದಿರಿ ಅದನ್ನು ಮತೊಂದು ಆರ್ಡಿನೆನ್ಸ್ ಮೂಲಕ ತನ್ನಿ. ಈಗ ಈ ಬಿಲ್ ಪಾಸ್ ಮಾಡೋಣ ಎಂದು ಹೇಳಿದ್ದಾರೆ.

ಶ್ರೀ ಬಿ. ಸೋಮಶೇಖರ್ : ಈ 45 ಬಿ ಒಂದು. ಐದು ವರ್ಷಕ್ಕೆ ರಿವೈಸ್ ಮಾಡಿಕೊಳ್ಳಿ.

ಅಧ್ಯಕ್ಷರು : ತಾವು ಹೇಳಿದ್ದಾಯಿತಲ್ಲಾ, ಮಾನ್ಯ ಮಂತ್ರಿಗಳು ಉತ್ತರ ಕೊಡುವುದಕ್ಕೆ ಸಮಯ ಕೊಡಿ.

ಶ್ರೀ ಬಿ. ಸೋಮಶೇಖರ್ : ಅಮೆಂಡ್‌ಮೆಂಟ್ ಈಗಲೇ ಮೂವ್ ಮಾಡಲಿ.

ಶ್ರೀ ಜಗದೀಶ್ ಶೆಟ್ಟರ್ : ಎವ್ವೆರ್ರಿ ಫೈವ್ ಇಯರ್ ಎಂದು ಮಧ್ಯಾಹ್ನ ಒಂದು ಅಮೆಂಡ್‌ಮೆಂಟ್ ತಂದುಬಿಡಲಿ.

ಶ್ರೀ ಬಿ. ಸೋಮಶೇಖರ್ : ನಾವೆಲ್ಲಾ ಪಾಸ್ ಮಾಡಿಕೊಡುತ್ತೇವೆ.

ಶ್ರೀ ಡಿ.ಕೆ. ಶಿವಕುಮಾರ್ : ಮಾನ್ಯ ಅಧ್ಯಕ್ಷರೆ, ನಾನು ಇಲ್ಲಿ ಬಿಲ್ ತಂದಿರುವುದು ಜಾಸ್ತಿ ಟ್ಯಾಕ್ಸ್ ಇತ್ತು ಅದನ್ನು ಕಡಿಮೆ ಮಾಡುವುದಕ್ಕೋಸ್ಕರ ತಂದಿದ್ದೇನೆ. ನಾನು ಇಷ್ಟು ಬುದ್ದಿವಂತರು ಪ್ರಜ್ಞಾವಂತರು ಏನೋ ಬೊಲಿಟಿಕಲ್ ಮೈಲೇಜ್ ತೆಗೆದುಕೊಳ್ಳುತ್ತಾರೆ ಎಂದರೆ ಇವರು ಮಾಡುತ್ತಿರುವುದನ್ನು ನೋಡಿದರೆ ಜನರೆಲ್ಲಾ ಇವರ ಮೇಲೆ ಬೀಳುವ ಹಾಗೆ ಮಾಡಿಕೊಳ್ಳುತ್ತಿದ್ದಾರೆ

ಏಕೆ ಈ ರೀತಿ ಮಾಡಿಕೊಳ್ಳುತ್ತಿದ್ದಾರೆಂಬುದು ನನಗೆ ಅರ್ಥವಾಗುತ್ತಿಲ್ಲ. ನಾವು ತಂದಿರುವುದು ಜನರಿಗೆ ಅನುಕೂಲವಾಗಲಿ ಎಂದು. ಇವರು ಏನೇನು ಸಲಹೆ ಕೊಡುತ್ತಿದ್ದಾರೆ, ಅದನ್ನು ನಾನು ಹೇಳುತ್ತಿದ್ದೇನೆ We can sit; we can sort out. Definitely we can bring amendment. ಅದು ಬೇರೆ ವಿಚಾರ. ನಾವು ಇಲ್ಲಿ ಬಂದಿರುವಂತಹ ಅಮೆಂಡ್‌ಮೆಂಟ್ ಅನ್ನು ರೆಕ್ಟಿಫೈ ಮಾಡಿ ನಾವು ಚಾಸ್ತಿ ಇರುವುದನ್ನು ಕಡಿಮೆ ಮಾಡುವುದಕ್ಕೆ ತಂದಿದ್ದೇವೆ. ಅದಕ್ಕೆ ನೀವು ಯಾವುದೋ ಇಶ್ಯೂ ತೆಗೆದುಕೊಂಡು, ಇದು ಬಹಳ ಚೆನ್ನಾಗಿ ಇದೆ. ಹೆಸರು ಬಂದು ಬಿಡುತ್ತದೆ. ಜನರಿಗೆ ಒಂದು ಕನ್‌ಫ್ಯೂಶನ್ ಕ್ರಿಯೇಟ್ ಮಾಡಬೇಕೆಂದು ಪ್ರಯತ್ನಪಟ್ಟರೆ we cannot do anything. ಆದುದರಿಂದ ದಯವಿಟ್ಟು ಈಗಲೂ ನಾನು ರಿಕ್ವಿಸ್ಟ್ ಮಾಡಿಕೊಳ್ಳುತ್ತೇನೆ This is one of the best Acts and Bills we have introduced. ಇಡೀ ರಾಷ್ಟ್ರಕ್ಕೆ ಪ್ರೋಗ್ರೆಸ್ಸೀವ್ ತರುವ ಬಿಲ್. ದಯವಿಟ್ಟು ಎಲ್ಲರೂ ಸಮ್ಮತಿ ಕೊಡಬೇಕು. ನಮಗೆ ಅವರ ಮೇಲೆ ಏನೂ ತಾರತಮ್ಯ ಇಲ್ಲ. we know their feelings. ಅವರು ಡೆಮಾಕ್ರಟಿಕ್ ಸೆಟಪ್‌ನಲ್ಲಿ ಬದುಕಬೇಕಾದರೆ ಅವರು ಏನಾದರೂ ಒಂದು ಮಾಡಲೇಬೇಕು. ಅದನ್ನು ಬೇರೆ ಸಂದರ್ಭದಲ್ಲಿ ಚರ್ಚೆ ಮಾಡೋಣ. ಆದರೆ ಈ ವಿಚಾರದಲ್ಲಿ ನಂಬಿಕೆ ಇದೆ, ಅವರಿಗೆ ಸಂತೋಷ ಬಹಳ ಇದೆ. ಒಳ್ಳೆಯ ಕೆಲಸವಾಗುತ್ತಿದೆ. ಮಾನ್ಯ ಸೋಮಶೇಖರ್ ಅವರಿಗೂ ಸಂತೋಷ ಇದೆ. ಇದನ್ನು ಪಾಸ್ ಮಾಡಿ.

ಶ್ರೀ ಬಿ. ಸೋಮಶೇಖರ್ : ಮಾನ್ಯ ಅಧ್ಯಕ್ಷರೆ, ನಾನು ವಿರೋಧ ಪಕ್ಷದ ಸದಸ್ಯರಿಗೆ ಕೇಳಿಕೊಳ್ಳುತ್ತೇನೆ. ನಮ್ಮ ಅಭಿಪ್ರಾಯ ಅದೇ ಆಗಿದೆ. ಮಾನ್ಯ ಮಂತ್ರಿಗಳ ಅಭಿಪ್ರಾಯ ಕೂಡ ಅದೇ ಆಗಿದೆ. ಅವರು ತಾತ್ವಿಕವಾಗಿ ಒಪ್ಪಿಕೊಂಡಿದ್ದಾರೆ. ಬೆಂಗಳೂರಿನಲ್ಲಿ ಏನು ವ್ಯವಸ್ಥೆ ಇದೆ ಅದನ್ನು ಎಲ್ಲಾ ಕಡೆ ರಾಜ್ಯದ ಬೇರೆ ಭಾಗಗಳಿಗೂ ಇದೆ ವ್ಯವಸ್ಥೆಯನ್ನು ಒಪ್ಪಿಕೊಳ್ಳುತ್ತೇವೆಂದು ಘೋಷಣೆ ಮಾಡಿದ್ದೀರಿ. ಇನ್ನೊಂದು 45ಬಿ ಐದು ವರ್ಷಗಳಿಗೆ ರಿವಿಶನ್ ಮಾಡುವಂತಾದ್ದು ಹೇಳಿದ್ದಾರೆ. ಅವರು ತಾತ್ವಿಕವಾಗಿ ಒಪ್ಪಿಕೊಂಡ ಮೇಲೆ ಇಲ್ಲಿ ಏನೋ ತಾವು ಅಮೆಂಡ್‌ಮೆಂಟ್ ತಂದುಬಿಟು ನಾವೆಲ್ಲರೂ ಕೇಳಿಕೊಳ್ಳುತ್ತೇವೆ ಧರಣಿಯಿಂದ ವಾಪಸ್ಸು ಬನ್ನಿ ಎಲ್ಲರೂ ಸರ್ವಾನುಮತದಿಂದ ನೀವು ತಂದಂತಹ ಕ್ರಾಂತಿಕಾರಕ ಬಿಲ್ ಎಂದು ಇದನ್ನು ಹೇಳೋಣ. ಕ್ರಾಂತಿಕಾರಕ ತಿದ್ದುಪಡಿ ಎಂದು ಹೇಳಿ, ಶಿವಕುಮಾರ್ ಅವರಿಗೆ ಕ್ರೆಡಿಟ್ ಕೊಡೋಣ. ಚುನಾವಣೆ ಅವರಿಗೆ ಅನುಕೂಲವಾಗಲಿ ಚಿಮತೆಯಿಲ್ಲ. ಆದರೆ ವಿರೋಧ ಮಾಡಿಕೊಂಡು ಎಲ್ಲಾದಕ್ಕೂ ಪ್ರೆಸ್ಟೀಜ್ ತೆಗೆದುಕೊಳ್ಳಬೇಡಿ. ನಾನು ಇಷ್ಟು ಕೇಳಿಕೊಳ್ಳುತ್ತಿದ್ದೇನೆ, ಇನ್ನೊಂದು ಸಾರಿ ತಾವು ಅಡ್ವೈಜ್ ಮಾಡಿ. ಇಲ್ಲಿ ಒಂದು ಅರ್ಧ ಗಂಟೆಯಲ್ಲಿ ಅಮೆಂಡ್‌ಮೆಂಟ್ ತಂದು ಇದನ್ನು ಮೂವ್ ಮಾಡಿ. ಒಳ್ಳೆಯ ಕೆಲಸ ಮಾಡಿ ವಿರೋಧ ಮಾಡಿಕೊಂಡ ಹಾಗೆ ಆಗುತ್ತದೆ. ಈ ಅಮೆಂಡ್‌ಮೆಂಟ್ ತನ್ನಿ, ತರುತ್ತೇನೆಂದು ತಾವು ಸರ್ಕಾರದ ಪರವಾಗಿ ಹೇಳಿಬಿಡಿ.

ಶ್ರೀ ಡಿ.ಕೆ. ಶಿವಕುಮಾರ್ : ಅವರು ಅರ್ಥನೇ ಮಾಡಿಕೊಂಡಿಲ್ಲ. ನಾವು ತಂದಿರುವಂತಹ ಬಿಲ್ ಅನ್ನು ಮತಕ್ಕೆ ಹಾಕಬೇಕೆಂದು ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ, "2003ನೇ ಸಾಲಿನ ಕರ್ನಾಟಕ ಪೌರ ನಿಗಮಗಳ

(ತಿದ್ದುಪಡಿ ವಿಧೇಯಕವನ್ನು ಪರ್ಯಾಲೋಚಿಸುವುದು"

ಪ್ರಸ್ತಪ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2 ರಿಂದ 35 ರವರೆಗೆ, ಎರಡೂ ಸೇರಿದಂತೆ,

ಪ್ರಸ್ತಾವ ಏನೆಂದರೆ :–

ಅಧ್ಯಕ್ಷರು : ಖಂಡ 2 ರಿಂದ 35 ರವರೆಗೆ, ಎರಡೂ ಸೇರಿದಂತೆ, ಈ ವಿಧೇಯಕದ ಅಂಗವಾಗಿರುತ್ತದೆ.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2 ರಿಂದ 35 ರವರೆಗೆ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 1 ಇತ್ಯಾದಿ

ಅಧ್ಯಕ್ಷರು : ಪ್ರಸ್ತಾವ ಏನೆಂದರೆ

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲ್ಪಟ್ಟಿತು).

ಪ್ರಸ್ತಾವದ ಅಂಗೀಕಾರ

ಶ್ರೀ ಡಿ.ಕೆ. ಶಿವಕುಮಾರ್ (ನಗರಾಭಿವೃದ್ಧಿ, ನಗರ ಯೋಜನೆ, ನಗರಸಭೆ) ಮಾನ್ಯ ಅಧ್ಯಕ್ಷರೆ, 2003ರ ಕರ್ನಾಟಕ ಪೌರ ನಿಗಮಗಳ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ."

ಅಧ್ಯಕ್ಷರು : ಪ್ರಸ್ತಾವ ಏನೆಂದರೆ,

"2003ರ ಕರ್ನಾಟಕ ಪೌರ ನಿಗಮಗಳ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು. ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

ಅಧ್ಯಕ್ಷರು : ಈಗ ಸದನವನ್ನು 3.00 ಗಂಟೆವರೆಗೆ ಮುಂದೂಡುತ್ತಿದ್ದೇನೆ.

(ಸದನವು ಮಧ್ಯಾಹ್ನ 1.41 ಗಂಟೆಗೆ ಮುಂದೂಡಲ್ಪಟ್ಟು ಮತ್ತೆ 3.00 ಗಂಟೆಗೆ ಸೇರಲು ತೀರ್ಮಾನಿಸಿತು)

(ಸದನವು ಪುನಃ ಮಧ್ಯಾಹ್ನ 3–10 ಗಂಟೆಗೆ ಸಮಾವೇಶಗೊಂಡಿತು)

(ಮಾನ್ಯ ಸಭಾಧ್ಯಕ್ಷರು ಶ್ರೀ ಎಂ.ವಿ. ವೆಂಕಟಪ್ಪನವರು) ಅಧ್ಯಕ್ಷ ಪೀಠವನ್ನಲಂಕರಿಸಿದರು)

ವಿಧೇಯಕವನ್ನು ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು

(2) ಕರ್ನಾಟಕ ಪೌರ ಸಭೆಗಳ (ತಿದ್ದುಪಡಿ) ವಿಧೇಯಕ 2003

ಪರ್ಯಾಲೋಚನಾ ಪ್ರಸ್ತಾವ

+**ಶ್ರೀ ಡಿ.ಕೆ. ಶಿವಕುಮಾರ್ (ನಗರಾಭಿವೃದ್ಧಿ ಸಚಿವರು)** : ಮಾನ್ಯ ಅಧ್ಯಕ್ಷರೆ, 2003ರ ಕರ್ನಾಟಕ ಪೌರ ಸಭೆಗಳ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ."

ಪ್ರಸ್ತಾವವನ್ನು ಮಂಡಿಸಲ್ಪಟ್ಟಿತು.

(† ಈ ಚಿಹ್ನೆಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ)